ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
53 ನೇ ವರ್ಷಕ್ಕೆ ಪಾದಾರ್ಪಣೆ
1973-2025

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ದಾವಣಗೆರೆ ನಗರವಾಣಿ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ    ಪ್ರಧಾನ ಸಂಪಾದಕರು: ಡಾ|| ಸಿ.ಕೆ.ಜಯಂತ್    ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಚಳ್ಳಕೆರೆಯಲ್ಲಿ ಪತ್ರಿಕೆಗೆ ಸಂಪರ್ಕಿಸಿ
ನಗರವಾಣಿ
ಚಳ್ಳಕೆರೆಯಲ್ಲಿ ಪತ್ರಿಕೆಗೆ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ
ವೈ ಬಸವರಾಜ, ಪ್ರತಿನಿಧಿ
ಮೊಬೈಲ್: 9901582325

ಸಂಪುಟ: 53 ಸಂಚಿಕೆ: 282 DEVANGERE E nagaravani.com mail: dngrvani@gmail.com ರಿ.ನಂ.24916/73 KA/SK/DVG -012/2023-25 ಗುರುವಾರ, ಫೆಬ್ರವರಿ 26, 2026 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

## ದೂರದಲ್ಲಿ ನಡೆಯಿತೇ ಕೋಣ ಬಲಿ? ಜಿಲ್ಲಾಡಳಿತ ನಿರಾಕರಣೆ

# ದುಗ್ಗಮ್ಮನಿಗೆ ಹರಕೆ ಸಲ್ಲಿಸಲು ಜನರ ನೂಕುನುಗ್ಗಲು ಹಳೆ ನಗರದ ಗಲ್ಲಿ ಗಲ್ಲಿಗಳಲ್ಲಿ ಬಾಡೂಟದ ಘಮ





ದಾ ನಗರವಾಣಿ ಸುದ್ದಿ

ದಾವಣಗೆರೆ: ಬುಧವಾರ ನಡೆದ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಅದ್ದೂರಿತನಕ್ಕೆ, ಭಕ್ತಿ ಪರಾಕಾಷ್ಠೆಗೆ, ವಿದ್ಯುಕ್ತ ಆಚರಣೆಗೆ ದಾವಣಗೆರೆ ಜನತೆ ಸಾಕ್ಷಿಯಾದರು. ಶಿವಾಜಿ ನಗರದಲ್ಲಿರುವ ನಗರದ ಅಧಿದೇವತೆ ಶ್ರೀ ದುಗ್ಗಮ್ಮನ ದೇವಸ್ಥಾನದ ಸುತ್ತ ಮುತ್ತ ಎಲ್ಲಿ ನೋಡಿದರು ಭಕ್ತರ ಉಧೋ... ಉಧೋ.. ದುಗ್ಗಮ್ಮ ಎನ್ನುವ ಭಕ್ತಿಯ ಧ್ವನಿಯೇ ಕೇಳಿಸುತ್ತಿತ್ತು.

ದಾವಣಗೆರೆ ನಗರದ ನಾಲ್ಕು ದಿಕ್ಕುಗಳಿಂದ ಮಧ್ಯ ರಾತ್ರಿ 12 ಗಂಟೆಯಿಂದಲೇ ಶ್ರೀ ದುರ್ಗಾಂಬಿಕಾ ದೇವಸ್ಥಾನಕ್ಕೆ ಜನ ಸಾಗರವೇ ಹರಿದು ಬಂದಿತು. ಕುಟುಂಬ ಸದಸ್ಯರೆಲ್ಲ ಸೇರಿ ಹಣೆಯ ಮೇಲೆ ವಿಭೂತಿ, ಕುಂಕುಮ ಬಳಿದುಕೊಂಡು, ಕೈಯಲ್ಲಿ ಬೇವು ಹಿಡಿದು ಉಧೋ... ಉಧೋ... ದುಗ್ಗಮ್ಮನ ಎನ್ನುತ್ತ ಭಕ್ತಿಯಿಂದ ದೇವಸ್ಥಾನ ದಾರಿ ಹಿಡಿದರು. ಹರಕೆ ಹೊತ್ತವರು ದೇವಸ್ಥಾನ ಸುತ್ತ ಉರುಳು ಸೇವೆ, ದೀಡು ನಮಸ್ಕಾರ ಹಾಕಿ ದೇವಿಗೆ ತಮ್ಮ ಹರಕೆಯನ್ನು ತೀರಿಸಿದರು.

ನಂತರ ದೇವಸ್ಥಾನ ಆವರಣದಲ್ಲಿ ಹರಕೆ ತೀರಿಸಿದ ಮಕ್ಕಳಿಗೆ ಪೋಷಕರು ಹೊಸ ಬಟ್ಟೆ ತೊಡಿಸಿ, ಆರತಿ ಎತ್ತಿ ಪೂಜೆಯನ್ನು ನೆರವೇರಿಸಿದರು. ರಾತ್ರಿಯಿಂದಲೇ ದೇವಸ್ಥಾನಕ್ಕೆ ಭಕ್ತರ ದಂಡು ಹರಿದು ಬರುತ್ತಿತ್ತು. ಜೊತೆ ಹರಕೆ ಕುರಿಗಳನ್ನು ಕೂಡ ಕರೆದುಕೊಂಡು ಬಂದು ಕೊನೆಯ ಪ್ರದಕ್ಷಿಣೆಯನ್ನು ಹಾಕಿದರು. ವೀಲ್ ಚೇರ್‌ನಲ್ಲಿ ಬಂದು ದೇವಿಯ ದರ್ಶನ ಪಡೆದ ಭಕ್ತೆಯೊಬ್ಬರು ಗಮನ ಸೆಳೆದರು. ದೇವಸ್ಥಾನ ಹೋಗಿ ಬರುವ ಭಕ್ತರಿಗೆ ನಗರದೆಲ್ಲೆಡೆ ಪಾನಕ, ಮಜ್ಜಿಗೆ ವ್ಯವಸ್ಥೆಯಲ್ಲಿ ಸಂಘ-ಸಂಸ್ಥೆಗಳಿಂದ ಮಾಡಲಾಗಿತ್ತು.

ಬುಧವಾರ ದೇವಿಗೆ ಪದ್ಧತಿ ಪ್ರಕಾರ ಪೂಜೆಯನ್ನು ನೆರವೇರಿಸಿ ಬೆಳಗ್ಗೆ 8 ಗಂಟೆಗೆ ಚರಗ ಚೆಲ್ಲಲಾಯಿತು. ಕೈಯಲ್ಲಿ ಚರಗದ ಪುಟ್ಟಿ ಹಿಡಿದು ಯುವಕರು ಉಘೆ... ಉಘೆ... ದುಗ್ಗಮ್ಮ ಎನ್ನುತ್ತ ಚರಗ ಚೆಲ್ಲಿದರು. ಚರಗ ತಮ್ಮ ಮನೆಯ ಬಳಿ ಬರುತ್ತಿದ್ದಂತೆ ಭಕ್ತರು ಚರಗದ ಕಾಳುಗಳನ್ನು ಪಡೆದು ತಮ್ಮ ತಮ್ಮ ಮನೆಯ ಮೇಲೆ ಎಸೆದರು. ಇದರಿಂದ ತಮ್ಮ ಮನೆಯ ಮೇಲೆ ದೇವಿಯ ಕೃಪೆ ಇರಲಿದೆ ಎನ್ನುವುದು ನಂಬಿಕೆ.

ಉಡುಪು ರಹಿತ ಬೇವಿನ ಉಡುಗೆ ಧರಿಸಿ ಭಕ್ತಿಯನ್ನು ಸಮರ್ಪಿಸುವುದು ನಿಷೇಧವಿದ್ದರೂ ಕೂಡ ಅನೇಕ ಭಕ್ತರು ಬೇವಿನ ಉಡುಗೆಯನ್ನು ಮನೆಯಿಂದಲೇ ಧರಿಸಿ ಬರುತ್ತಿದ್ದರು. ಆದರೆ ದೇವಸ್ಥಾನ ಆವರಣದಲ್ಲಿ ತಡೆದ ಮಹಿಳಾ ಮತ್ತು ಮಕ್ಕಳ ಇಲಾಖೆ ಸಿಬ್ಬಂದಿಗಳು ಭಕ್ತರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿದರು. ನಂತರ ಉಡುಪು ಧರಿಸಿ ಅದರ ಮೇಲೆ ಬೇವು ಸುತ್ತಿಕೊಂಡು ಭಕ್ತಿಯನ್ನು ಸಮರ್ಪಿಸುವಂತೆ ಪ್ರೇರೇಪಿಸಿದರು.

30 ಸಾವಿರಕ್ಕೂ ಹೆಚ್ಚು ಕುರಿಗಳ ಬಲಿ: ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯಿಂದ ಬುಧವಾರ ಸಂಪೂರ್ಣ ದಾವಣಗೆರೆ ಕಳೆಗಟ್ಟಿತ್ತು. ಪೂಜೆ ನೆರವೇರಿದ ನಂತರ ಹರಕೆ ಕುರಿಗಳನ್ನು ಬಲಿ ಕೊಡಲಾಯಿತು. ಅಂದಾಜಿನ ಪ್ರಕಾರ 30 ಸಾವಿರಕ್ಕೂ ಹೆಚ್ಚು ಕುರಿಗಳನ್ನು ಬುಧವಾರ ಬಲಿ ಕೊಡಲಾಗಿದೆ. ಮಧ್ಯಾಹ್ನ ಮತ್ತು ರಾತ್ರಿ ಬೀಗರು, ಸ್ನೇಹಿತರು, ಬಂಧುಗಳ ಜೊತೆ ಕೂಡ ಭರ್ಜರಿ ಬಾಡೂಟವನ್ನು ದಾವಣಗೆರೆ ಜನ ಸವಿದಿದ್ದಾರೆ. ಇಂದು ಗುರುವಾರ ಕೂಡ ಕುರಿಗಳ ಬಲಿ ನಡೆಯಲಿದ್ದು, ದಾವಣಗೆರೆಯಲ್ಲಿ ಇನ್ನೂ ಮೂರು ದಿನ ಬಾಡೂಟದ ಗಮ್ಮತ್ತು ಇರಲಿದೆ. ಕುರಿ ಚರ್ಮ ಐನೂರು ರೂಗಳವರೆಗೆ ಮಾರಾಟವಾಗಿದೆ.

(3ನೇ ಪುಟಕ್ಕೆ)

**ಹಳೆ ನಗರದಲ್ಲಿ ಬಾಡೂಟದ ಘಮ:**
ದಾವಣಗೆರೆ ಹಳೆ ಭಾಗ ಬಾಡೂಟದಿಂದ ಘಮ ಘಮಿಸುತ್ತಿತ್ತು. ಹಬ್ಬದ ನಿಮಿತ್ತ ಪ್ರತಿ ಮನೆ ಮುಂಭಾಗ ಪೆಂಡಾಲ್ ಹಾಕಲಾಗಿತ್ತು. ಬುಧವಾರ ಸಂಜೆ 7 ಗಂಟೆಯ ನಂತರ ಬಾಡೂಟಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸವಾರರು ಪರದಾಡಿದರು. ಪೊಲೀಸರು ನಿಯಂತ್ರಿಸಲು ಹರಸಾಹಸ ಪಟ್ಟರು.

**ರಾತ್ರಿ ಇಡೀ ಕಾದು ಕುಳಿತ ಡಿಸಿ-ಎಸ್ಪಿ:**
ಜಾತ್ರೆ ನಿಮಿತ್ತ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಜಾತ್ರೆಯ ಸುಗಮ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗಿತ್ತು. ಜನಸಂದಣಿ ಹೆಚ್ಚಿರುವ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಡ್ರೋನ್ ಮೂಲಕವೂ ನಿಗಾ ವಹಿಸಲಾಗಿತ್ತು. ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಎಸ್ಪಿ ಶೇಖರ್, ಜಿಲ್ಲಾ ಪಂಚಾಯ್ತಿ ಸಿಇಓ ಗಿತ್ತೆ ಮಾದವ್ ವಿಠ್ಠಲ್ ರಾವ್ ದೇವಸ್ಥಾನ ಸ್ಥಳದಲ್ಲೇ ರಾತ್ರಿ ಇಡೀ ಕಾದು ಕುಳಿತು ಸೂಕ್ಷ್ಮವಾಗಿ ಅವಲೋಕಿಸಿದರು.

**ಕೋಣ ಬಲಿ ನಡೆಯಿತೆ?:**
ಶ್ರೀ ದುರ್ಗಾಂಬಿಕಾ ದೇವಿಗೆ ಬಿಡಲಾಗಿದ್ದ ಕೋಣವನ್ನು ಬಸವರಾಜ್ ಪೇಟೆಯ ಚೌಡಮ್ಮ ದೇವಸ್ಥಾನ ಹಿಂಭಾಗ ಬಲಿ ಕೊಡಲಾಗಿದೆ ಎನ್ನಲಾಗಿದೆ. ಆರೇಳು ಹೊಡೆತಗಳಿಗೆ ಕೋಣ ಬಲಿಯಾಗಿದೆ ಎಂಬ ಸುದ್ದಿ ಹರಡುತ್ತಿದ್ದಂತೆ ಹಬ್ಬ ಕಳೆ ಬಂದಿತು ಎನ್ನಲಾಗಿದೆ. ಇದನ್ನು ತಳ್ಳಿ ಹಾಕಿರುವ ಜಿಲ್ಲಾಧಿಕಾರಿ ಮತ್ತು ಎಸ್‌ಪಿ ಪ್ರಾಣಿ ಬಲಿಯಂಥ ಕೃತ್ಯಗಳು ನಡೆದಿಲ್ಲ. ಭಕ್ತರು ಅತ್ಯಂತ ಭಕ್ತಿಪರವಶರಾಗಿ, ಮೂಢನಂಬಿಕೆಗಳಿಂದ ದೂರವಾಗಿ ಜಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

**ಸಿಕ್ಕಸಿಕ್ಕವರ ಮೇಲೆ ಹಲ್ಲೆ:**
ದೇವಿಗೆ ಬಲಿ ಕೊಟ್ಟ ಎನ್ನಲಾದ ಪ್ರಾಣಿಯ ಕಾಲುಗಳನ್ನು ಹಿಡಿದು ಯುವಕನೊಬ್ಬ ಜನರ ಮೇಲೆ ಹಲ್ಲೆ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಸಮೀಪ ಘಟನೆ ನಡೆದಿದ್ದು, ಬಲಿ ಕೊಟ್ಟ ಪ್ರಾಣಿಯ ಕಾಲುಗಳಿಂದ ಸಿಕ್ಕ ಸಿಕ್ಕವರ ಮೇಲೆ ಹಲ್ಲೆ ಮಾಡಿದ್ದು, ಜನರು ಹಲ್ಲೆಯಿಂದ ತಪ್ಪಿಸಿಕೊಂಡು ಓಡಿದ್ದಾರೆ.







## ನಮ್ಮನ್ನೂ ಮಂತ್ರಿ ಮಾಡಿ: ಈಗ ವಿಧಾನ ಪರಿಷತ್ ಸದಸ್ಯರ ಪತ್ರ

ಬೆಂಗಳೂರು: ಇತ್ತೀಚೆಗಷ್ಟೇ ಸಚಿವ ಸಂಪುಟ ಪುನಾರಚನೆಗೆ 31 ಶಾಸಕರು ಒತ್ತಾಯ ಮಾಡಿ ಹೈಕಮಾಂಡ್ ನಾಯಕರಿಗೆ ಪತ್ರ ಬರೆದ್ದರು. ಇದರ ಬೆನ್ನಲ್ಲೇ ಕಾಂಗ್ರೆಸ್‌ನ 24 ಮಂದಿ ವಿಧಾನ ಪರಿಷತ್ ಸದಸ್ಯರೂ ಪತ್ರ ಬರೆದಿರುವುದು ಕುತೂಹಲ ಮೂಡಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನ ಭೇಟಿಯಾದ ಪರಿಷತ್ ಸದಸ್ಯರು, ಸೂಕ್ತ ಪ್ರಾತಿನಿಧ್ಯ ನೀಡುವಂತೆ ಒತ್ತಾಯಿಸಿದ್ದಾರೆ. ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವಂತೆ 24 ಎಂಎಲ್‌ಸಿಗಳು ಸಹಿ ಮಾಡಿದ ಪತ್ರವನ್ನ ಖರ್ಗೆ ಅವರಿಗೆ ಸಲ್ಲಿಸಿದ್ದಾರೆ. (4ನೇ ಪುಟಕ್ಕೆ)

## ಗ್ಯಾರಂಟಿಗಳಿಂದ ಸರ್ಕಾರಕ್ಕೆ ಹೊರೆ ಆಗ್ತಿದೆ: ಡಿಕೆ ಶಿವಕುಮಾರ್

ಬೆಂಗಳೂರು: ಗ್ಯಾರಂಟಿಗಳು ಸರ್ಕಾರಕ್ಕೆ ಹೊರೆಯಾಗುತ್ತಿವೆ ಎಂದು ಖುದ್ದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವ್ರೇ ತಿಳಿಸಿದ್ರು.

ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಹಿಮೋಫಿಲಿಯಾ ರೋಗಿಗಳಿಗೆ ಉಚಿತ ಆಂಬುಲೆನ್ಸ್ ಸೇವೆ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

200 ಯೂನಿಟ್ ಉಚಿತ ಕರೆಂಟ್, ಗೃಹಲಕ್ಷ್ಮಿ, ಫ್ರೀ ಬಸ್, ಅನ್ನ ಭಾಗ್ಯ, ಶಕ್ತಿಯೋಜನೆಯಂತಹ ಗ್ಯಾರಂಟಿಗಳನ್ನ ರಾಜ್ಯ ಸರ್ಕಾರ ಕೊಟ್ಟಿದೆ. ಸರ್ಕಾರಕ್ಕೆ (2ನೇ ಪುಟಕ್ಕೆ)

## ದೆಹಲಿ 'ಇಂದ್ರಪ್ರಸ್ಥ' ಆಗಲಿ: ಬೇಡಿಕೆ

ಹೊಸದಿಲ್ಲಿ: ಕೇಂದ್ರ ಸರಕಾರ ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಮರುನಾಮಕರಣ ಮಾಡಿದಂತೆ, ದೆಹಲಿಗೂ "ಇಂದ್ರಪ್ರಸ್ಥ" ಎಂದು ಮರುನಾಮಕರಣ ಮಾಡುವ ಬೇಡಿಕೆ ಕೇಳಿಬಂದಿದೆ.

ಈ ಬಗ್ಗೆ ಗೃಹಸಚಿವ ಅಮಿತ್ ಷಾ ಅವರಿಗೆ ಪತ್ರ ಬರೆದಿರುವ ಸಂಸದ ಪ್ರವೀಣ್ ಖಂಡೇಲ್ವಾಲ್ ಅವರು, ದೆಹಲಿ ಅನ್ನುವ ಹೆಸರು ತಡವಾಗಿ ಅಸ್ತಿತ್ವಕ್ಕೆ ಬಂದಿದ್ದು, ಪುರಾತನ ನಾಗರಿಕತೆಯ ಬೇರಿನೊಂದಿಗೆ ಸಂಬಂಧ ಇರುವ (3ನೇ ಪುಟಕ್ಕೆ)

## ನನ್ನನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ: ಪರಮೇಶ್ವರ್



ಬೆಂಗಳೂರು: ಎರಡು ಸಲ ಪಕ್ಷವನ್ನ ಅಧಿಕಾರಕ್ಕೆ ತಂದಿದ್ದೇನೆ. ಉಪಮುಖ್ಯಮಂತ್ರಿ ಆಗಿದ್ದೇನೆ. ಸಾಮರ್ಥ್ಯ ಇಲ್ಲದೇ ಡಿಸಿಎಂ ಮಾಡ್ತಾರಾ? ಸಾಮರ್ಥ್ಯದ ಬಗ್ಗೆ ನನ್ನ ವಿಷಯದಲ್ಲಿ ಯಾರು ಪ್ರಶ್ನೆ ಮಾಡುವಂತಿಲ್ಲ ಎಂದು ಗೃಹ ಸಚಿವ ಪರಮೇಶ್ವರ್ ತಮ್ಮ ವಿರೋಧಿಗಳಿಗೆ ತಿರುಗೇಟು ನೀಡಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರದಲ್ಲಿ ಮಾಜಿ ಸಚಿವ ಕೆ ಎನ್ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಅದರಲ್ಲಿ ಏನಾದರೂ ತಪ್ಪು ಇದ್ಯಾ? ತಪ್ಪು ಇದ್ರೆ ಹೇಳಿ ಸರಿ ಮಾಡೋಣ. ಸಾರ್ವಜನಿಕವಾಗಿ ಹಾದಿ ಬೀದಿಯಲ್ಲಿ ಚರ್ಚೆ ಮಾಡೋದಲ್ಲ. ಅದು ಏನಿದ್ರೂ ಹೈ ಕಮಾಂಡ್ ಜೊತೆ ಕ್ಲೋಸ್ ಡೋರಿನಲ್ಲಿ ಚರ್ಚೆ ಮಾಡಬೇಕು. ಇಲ್ಲ ಅಂದರೆ (4ನೇ ಪುಟಕ್ಕೆ)

## ಚಿತ್ರದುರ್ಗ; ಮೊಬೈಲ್ ಸ್ಕ್ರೀನ್ ಹಣ ಕೇಳಿದ್ದಕ್ಕೆ ಚಾಕು ಇರಿತ

ಚಿತ್ರದುರ್ಗ: ಮೊಬೈಲ್ ಅಂಗಡಿ ಮಾಲೀಕನಿಗೆ ಯುವಕನೊಬ್ಬ ಚಾಕು ಇರಿದ ಘಟನೆ ಚಿತ್ರದುರ್ಗದ ಸಂತೆ ಮೈದಾನದಲ್ಲಿ ನಡೆದಿದೆ.

ವಿಕ್ರಮ್ ಚೌದ್ರಿ ಎಂಬವರ ಅಂಗಡಿಗೆ ಯುವಕನೊಬ್ಬ ಮೊಬೈಲ್ ಸ್ಕ್ರೀನ್ ಹಾಕಿಸಲು ಬಂದಿದ್ದ. ಈ ವೇಳೆ ಬೇರೆ ಬ್ರ್ಯಾಂಡ್‌ನ ಮೊಬೈಲ್ ಸ್ಕ್ರೀನ್‌ಗೆ 100 ರೂ. ಹೆಚ್ಚುವರಿ ಆಗುತ್ತದೆ ಎಂದು ಹೇಳಿದ್ದಾರೆ.

100 ರೂ. ಹೆಚ್ಚುವರಿ ಹಣ ಕೇಳಿದ್ದಕ್ಕೆ ಸಿಟ್ಟಾದ ಯುವಕ ಚಾಕು ಇರಿದಿದ್ದಾನೆ. ಯುವಕ ಚಾಕು ಇರಿಯುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವಿಕ್ರಮ್ ಚೌದ್ರಿ ಅವರು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. (3ನೇ ಪುಟಕ್ಕೆ)

## ಪ್ರಧಾನಿ ಎರಡು ದಿನಗಳ ಇಸ್ರೇಲ್ ಪ್ರವಾಸ; ನೆತನ್ಯಾಹು ಸ್ವಾಗತ

ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬುಧವಾರದಿಂದ ಎರಡು ದಿನಗಳ ಇಸ್ರೇಲ್ ಭೇಟಿಯಲ್ಲಿರುತ್ತಾರೆ. ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಅವರು ಮೊನ್ನೆ ಫೆಬ್ರವರಿ 15ರಂದು ಜೆರುಸಲೇಮ್‌ನಲ್ಲಿ ನಡೆದ ಪ್ರಮುಖ ಅಮೆರಿಕನ್ ಯಹೂದಿ ಸಂಘಟನೆಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಮಾತನಾಡುವ ವೇಳೆ ಈ ಭೇಟಿಯ ಬಗ್ಗೆ ಮಾಹಿತಿ ನೀಡಿದ್ದರು.

ಇಂದು ಮತ್ತು ನಾಳೆ ಕಾರ್ಯಕ್ರಮಗಳಲ್ಲಿ ಇಬ್ಬರು ನಾಯಕರು (4ನೇ ಪುಟಕ್ಕೆ)



## ನಾನು ಯುದ್ಧ ನಿಲ್ಲಿಸದೆ ಇದ್ದಿದ್ರೆ ಪಾಕ್ ಪ್ರಧಾನಿ ಸಾಯ್ತಿದ್ರು: ಟ್ರಂಪ್

ವಾಷಿಂಗ್ಟನ್: ನನ್ನ ಮಧ್ಯಸ್ಥಿಕೆ ಇಲ್ಲದೇ ಇದ್ದಿದ್ರೆ, ಭಾರತ ವಿರುದ್ಧದ ಯುದ್ಧದಲ್ಲಿ ಪಾಕಿಸ್ತಾನ ಪ್ರಧಾನಿ ಸಾಯುತ್ತಿದ್ದರು ಅಂತ 3.5 ಕೋಟಿ ಜನ ಹೇಳ್ತಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ತಮ್ಮ 2ನೇ ಅವಧಿಯ ಸರ್ಕಾರಕ್ಕೆ 1 ವರ್ಷ ತುಂಬಿದ ಹಿನ್ನೆಲೆ ದೇಶವನ್ನುದ್ದೇಶಿಸಿ ಅವರು ಭಾಷಣ ಮಾಡಿದರು. ನಮ್ಮ ರಾಷ್ಟ್ರವು ಗತವೈಭವಕ್ಕೆ ಮರಳಿದೆ. ಹಿಂದೆಂದಿಗಿಂತಲೂ ದೊಡ್ಡ, ಉತ್ತಮ, ಶ್ರೀಮಂತ ಮತ್ತು ಬಲಶಾಲಿ ದೇಶವಾಗಿದೆ ಎಂದು ಬೆನ್ನು ತಟ್ಟಿಕೊಂಡಿದ್ದಾರೆ. ಇದೇ ವೇಳೆ ಭಾರತ ಪಾಕ್ ಯುದ್ಧ ನಿಲ್ಲಿಸಿದ್ದಾಗಿ ಮತ್ತೆ ಹೇಳಿದ್ದಾರೆ.


ನನ್ನ ಮೊದಲ 10 ತಿಂಗಳ ಅವಧಿಯಲ್ಲೇ ನಾನು 8 (3ನೇ ಪುಟಕ್ಕೆ)

## ಭಾರತ ಜನಗಣತಿ-2027 ಸಮೀಕ್ಷೆಗೆ ಸಕಲ ಸಿದ್ಧತೆಗೆ ಕ್ರಮ ವಹಿಸಿ: ಗಂಗಾಧರ ಸ್ವಾಮಿ

ದಾವಣಗೆರೆ,ಫೆಬ್ರವರಿ.25: ಜಿಲ್ಲೆಯಲ್ಲಿ ಏಪ್ರಿಲ್ 16 ರಿಂದ ಮೇ 15 ರವರೆಗೆ 30 ದಿನಗಳ ಕಾಲ ಭಾರತದ ಜನಗಣತಿ 2027 ರ ಸಮೀಕ್ಷೆ ನಡೆಯಲಿದ್ದು ಸಮೀಕ್ಷೆಗೆ ಎಲ್ಲಾ ಸಿದ್ಧತೆಗಳನ್ನು ಅಧಿಕಾರಿಗಳು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಎಂ ಗಂಗಾಧರ ಸ್ವಾಮಿ ಸೂಚಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಭಾರತದ ಜನಗಣತಿ 2027 ರ ಮೊದಲ ಹಂತದ ಕ್ಷೇತ್ರ ಕಾರ್ಯಚರಣೆ ಸಂಬಂಧ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಭಾರತದ ಜನಗಣತಿ 2027 ಸಮೀಕ್ಷೆಯನ್ನು ಸಮರ್ಪಕವಾಗಿ ನಡೆಸಲು ಜಿಲ್ಲಾಡಳಿತ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಸಮೀಕ್ಷಾ ಕಾರ್ಯದಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸುವಂತೆ ಸೂಚನೆ ನೀಡಿದರು. ಸಮೀಕ್ಷೆಯು ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಈ ಪ್ರಕ್ರಿಯೆಗೆ ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ತಿಳಿಸಿದರು.



ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಗಣತಿ-ದಾರರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳು ಗಣತೀದಾರರಿಗೆ ತರಬೇತಿ ನೀಡಬೇಕು, ಸಮೀಕ್ಷೆಯ ಗುಣಮಟ್ಟ ಕಾಪಾಡಿಕೊಳ್ಳಲು ಉತ್ತಮ ಸಾಮರ್ಥ್ಯವುಳ್ಳವರನ್ನು ಮಾತ್ರ ಗಣತಿದಾರರನ್ನಾಗಿ ನೇಮಕ ಮಾಡಿಕೊಳ್ಳಬೇಕು. ಈ ಹಿಂದೆ ಸಮೀಕ್ಷೆಯ ಸಂದರ್ಭದಲ್ಲಿ ಕಂಡುಬಂದ ತಾಂತ್ರಿಕ ತೊಂದರೆಗಳು ಮತ್ತು ಗೊಂದಲಗಳನ್ನು ಪರಿಹರಿಸಲಾಗಿದೆ. ಈ ಬಾರಿ ಸಮೀಕ್ಷೆಯನ್ನು ಯಾವುದೇ ದೋಷವಿಲ್ಲದೆ ನಡೆಸಲು ಆದ್ಯತೆ ನೀಡಲಾಗಿದೆ ಎಂದರು.

ಯಾವುದೇ ಕಾರಣಕ್ಕೂ ಸಮೀಕ್ಷೆಯ ಸಂದರ್ಭದಲ್ಲಿ (2ನೇ ಪುಟಕ್ಕೆ)

## ಗಾಜಿನ ಮನೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ ಫಲಪುಷ್ಪ ಪ್ರದರ್ಶನ; ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಚಾಲನೆ

ದಾ ನಗರವಾಣಿ ಸುದ್ದಿ

ದಾವಣಗೆರೆ: ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ದಾವಣಗೆರೆ ಮತ್ತು ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಗಾಜಿನ ಮನೆಯಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ -2025 ಕಾರ್ಯಕ್ರಮಕ್ಕೆ ಬುಧವಾರ ಸಂಜೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಚಾಲನೆ ನೀಡಿದರು.




ಫಲಪುಷ್ಪ ಪ್ರದರ್ಶನವು ಮಾರ್ಚ್ 1 ರ ವರೆಗೆ ಒಟ್ಟು ಐದು ದಿನಗಳ ಕಾಲ ಜರುಗಲಿದೆ. ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ಮುಖ್ಯ ಆಕರ್ಷಣೆಯಾಗಿ.ವಿಧಾನಸೌಧ" 42 ಅಡಿ ಉದ್ದ, 14 ಅಗಲ ಅಡಿ, 18 ಅಡಿ ಎತ್ತರದ ಕಲಾಕೃತಿಗಳನ್ನು ವೈವಿಧ್ಯಮಯ ಹೂವುಗಳಿಂದ ಅಲಂಕರಿಸಲಾಗಿದೆ. ಈ ಕಲಾಕೃತಿಗೆ 4 ಲಕ್ಷ ಸೇವಂತಿಗೆ ಹಳದಿ, ಬಿಳಿ, ನೇರಳೆ ಹೂವುಗಳಿಂದ ಶೃಂಗಾರ ಮಾಡಲಾಗಿದೆ.

ಹಂಪಿ ರಥ ವನ್ನು 10 ಅಡಿ ಉದ್ದ, 10 ಅಗಲ ಅಡಿ, 12 ಅಡಿ ಎತ್ತರದ ಕಲಾಕೃತಿ ರಚನೆ ಮಾಡಿ ಕಾಮಿನಿ ಎಲೆಗಳಿಂದ, 50 ಸಾವಿರ ಸೇವಂತಿಗೆ, 10 ಸಾವಿರ ಹೂವುಗಳಿಂದ ನಿರ್ಮಾಣ ಮಾಡಲಾಗಿದೆ. I LOVE DAVANAGERE 15 ಅಡಿ ಉದ್ದ, 7 ಅಡಿ ಎತ್ತರದ 10 ಸಾವಿರ ಸೇವಂತಿಗೆ ಹೂ ಮತ್ತು 50 ಸಾವಿರ ಕಾಮಿನಿ ಎಲೆಗಳಿಂದ ಶೃಂಗಾರ ಮಾಡಲಾಗಿದೆ.

ದಿವಂಗತ ಡಾ|| ಶಾಮನೂರು ಶಿವಶಂಕರಪ್ಪ ಮತ್ತು ಸಾಲುಮರದ ತಿಮ್ಮಕ್ಕ ರವರ ಸಾಧನೆಯ ಹಾದಿಗೆ ಪುಷ್ಪ ನಮನ. ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ 56 ಬಗೆಯ ಇಪ್ಪತ್ತು ಸಾವಿರಕ್ಕೂ ಹೆಚ್ಚು ವಿವಿಧ ಅಲಂಕಾರಿಕ ಗಿಡಗಳು ಮತ್ತು ಹೂವಿನ ಗಿಡಗಳ ವಿವಿಧ ಕಲಾತ್ಮಕ ವಿನ್ಯಾಸಗಳ ಜೋಡಣೆ ಮಾಡಲಾಗಿದೆ. ಇದರಲ್ಲಿ ಪ್ರಮುಖವಾಗಿ ಆಂತ್ರಿಯಂ, ಡಾಲಿಯಾ, ಜೀನಿಯಾ, (3ನೇ ಪುಟಕ್ಕೆ)

# ಮತದಾರರ ಪಟ್ಟಿ ತೀವ್ರ ಪರಿಶೀಲನೆಗೆ ತಡೆ ನೀಡಿ ಡಿಸಿಎಂ.ಗೆ 'ಎದ್ದೇಳು ಕರ್ನಾಟಕ'ದಿಂದ ಮನವಿ



ದಾ ನಗರವಾಣಿ ಸುದ್ದಿ

ದಾವಣಗೆರೆ.ಫೆ.24: ಕೇಂದ್ರ ಚುನಾವಣಾ ಆಯೋಗವು ಹಮ್ಮಿಕೊಂಡಿರುವ 'ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಶೀಲನೆ' ಪ್ರಕ್ರಿಯೆಯು ಪಾರದರ್ಶಕವಾಗಿಲ್ಲ ಮತ್ತು ಇದು ಲಕ್ಷಾಂತರ ಬಡವರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪಿತೂರಿಯಾಗಿದೆ ಎಂದು ಆರೋಪಿಸಿ 'ಎದ್ದೇಳು ಕರ್ನಾಟಕ' ಅಭಿಯಾನ ಹಾಗೂ ವಿವಿಧ ಸಾಮಾಜಿಕ ಸಂಘಟನೆಗಳ ಒಕ್ಕೂಟವು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಬೆಂಗಳೂರಿನಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಿಯೋಗವು, ಈ ಕೂಡಲೇ ರಾಜ್ಯ ಸರ್ಕಾರವು ಮಧ್ಯಪ್ರವೇಶಿಸಿ ಈ ತರಾತುರಿಯ ಪ್ರಕ್ರಿಯೆಗೆ ತಡೆ ನೀಡಬೇಕು ಎಂದು ಒತ್ತಾಯಿಸಿತು.

ಬಿಹಾರದಲ್ಲಿ ಇತ್ತೀಚೆಗೆ ನಡೆದ ಪರಿಶೀಲನೆಯಲ್ಲಿ ಸುಮಾರು 65 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾದ ಉದಾಹರಣೆಯನ್ನು ನೀಡಿದ ಮುಖಂಡರು, ಇದೇ ಮಾದರಿಯು ಈಗ ಕರ್ನಾಟಕದಲ್ಲಿಯೂ ಮರುಕಳಿಸುವ ಭೀತಿ ಇದೆ ಎಂದರು. ಸಾಂವಿಧಾನಿಕವಾಗಿ ಪ್ರತಿ 10 ವರ್ಷಕ್ಕೊಮ್ಮೆ ನಡೆಯುವ ಸಾಮಾನ್ಯ ಪರಿಶೀಲನೆಗಿಂತ ಈ 'ವಿಶೇಷ ತೀವ್ರ ಪರಿಶೀಲನೆ'ಯು ಹೆಚ್ಚು ರಾಜಕೀಯ ಪ್ರೇರಿತವಾಗಿದೆ ಎನ್ನುವುದು ಮೇಲು ನೋಟಕ್ಕೆ ಕಂಡು ಬರುತ್ತಿದೆ ಎಂದು ಮನವಿಯಲ್ಲಿ ಹೇಳಲಾಗಿದೆ.

"ಈ ವಿಶೇಷ ಪರಿಶೀಲನೆಯ ನೆಪದಲ್ಲಿ ಪಟ್ಟಿಯನ್ನು ಸಂಕ್ಷಿಪ್ತಗೊಳಿಸುವ ಉದ್ದೇಶವಿದೆ. ಇದರಿಂದ ಅಲೆಮಾರಿ ಸಮುದಾಯಗಳು, ಕೂಲಿ ಕಾರ್ಮಿಕರು, ಬಡವರು ಮತ್ತು ಒಂಟಿ ಮಹಿಳೆಯರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ 80% ಹೆಚ್ಚಿದೆ. ಇದು ಕೇವಲ ತಾಂತ್ರಿಕ ಪ್ರಕ್ರಿಯೆಯಲ್ಲ, ಬದಲಿಗೆ ಪ್ರಜಾಪ್ರಭುತ್ವದ ಆಶಯಗಳ ಮೇಲೆ ನಡೆಯುತ್ತಿರುವ ದಾಳಿ" ಎಂದು ನಿಯೋಗವು ತನ್ನ ಮನವಿಯಲ್ಲಿ ವಿವರಿಸಿದೆ.

ಈ ಸಂಬಂಧ ಈಗಾಗಲೇ ಸರ್ವೋಚ್ಚ ನ್ಯಾಯಾಲಯದಲ್ಲಿ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಿಚಾರಣೆಗೆ ಬಾಕಿ ಇರುವಾಗಲೇ, ಚುನಾವಣಾ ಆಯೋಗವು ಇಷ್ಟೊಂದು ತರಾತುರಿಯಲ್ಲಿ ಈ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿರುವುದು ಸಂಶಯಾಸ್ಪದವಾಗಿದೆ ಎಂದು ಸಂಘಟನೆಗಳು ಕಳವಳ ವ್ಯಕ್ತಪಡಿಸಿದವು. ರಾಜ್ಯದ ಪ್ರಜ್ಞಾವಂತ ಮತದಾರರು ಜಾಗೃತರಾಗಬೇಕು ಮತ್ತು ಸರ್ಕಾರವು ಜನಪರ ನಿಲುವು ತಳೆದು ಈ ಪ್ರಕ್ರಿಯೆಯನ್ನು ನಿಯಂತ್ರಿಸಬೇಕು ಎಂದು ಅವರು ಆಗ್ರಹಿಸಿದರು.

ಎದ್ದೇಳು ಕರ್ನಾಟಕದ ಮುಖಂಡರಾದ ತಾರಾ ರಾವ್, ನೂರ್ ಶ್ರೀಧರ್, ಪೀಪಲ್ಸ್ ಲಾಯರ್ಸ್ ಗಿಲ್ಡ್‌ನ ಅನೀಸ್ ಪಾಷ, ಜಮಾತ್–ಎ–ಇಸ್ಲಾಮಿಯ ಯೂಸುಫ್ ಕನ್ನಿ, ಡಿ.ಎಸ್.ಎಸ್‌ನ ವೆಂಕಟೇಶ್, ಸ್ವರಾಜ್ ಇಂಡಿಯಾದ ಅಮ್ಜದ್ ಪಾಷ ಸೇರಿದಂತೆ ಸತ್ಯ ಮತ್ತು ಇತರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ,ಫೆ.24 : ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಹಾಗೂ ತರಬೇತಿ ಪಡೆದ ಅರ್ಹ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ಸಹಾಯ ಧನವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದು 20 ರಿಂದ 55 ವರ್ಷದೊಳಗಿರಬೇಕು. ಅಭ್ಯರ್ಥಿಗಳು 10ನೇ ತರಗತಿ ಪಾಸಾದ ಪ್ರಮಾಣ ಪತ್ರ ಹಾಗೂ ಖಾಯಂ ಲಘು ವಾಹನ ಚಾಲನಾ ಪರವಾನಗಿ (ಡಿ.ಎಲ್) ನಕಲು ಪ್ರತಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಪ್ರವಾಸೋದ್ಯಮ ಇಲಾಖೆಯಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ದಾಖಲೆಗಳೊಂದಿಗೆ ಮಾರ್ಚ್ 13 ರೊಳಗಾಗಿ ಒಳಗಾಗಿ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ದಾವಣಗೆರೆ ಇವರಿಗೆ ದ್ವಿ–ಪ್ರತಿಯಲ್ಲಿ ಭರ್ತಿಯಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192–230123 ಸಂಪರ್ಕಿಸಬೇಕೆಂದು ಇಲಾಖೆಯ ಅಧಿಕಾರಿ ಕಾವ್ಯಾ ತಿಳಿಸಿದ್ದಾರೆ.

# ಗ್ರಾಮೀಣ ಭಾಗದ ಕೆರೆಗಳು ಜೀವಸಂಕುಲಕ್ಕೆ ಜೀವನಾಡಿ : ಉಜ್ಜಿನಿ ಪೀಠದ ಶ್ರೀ ಅಭಿಮತ



ದಾ.ನಗರವಾಣಿ ಸುದ್ದಿ

ಜಗಳೂರು,ಫೆ.24: ಗ್ರಾಮೀಣ ಭಾಗದಲ್ಲಿನ ಕೆರೆಗಳು ಭರ್ತಿಯಾಗುವುದರಿಂದ ಅಂತರ್ಜಲ ಅಭಿವೃದ್ಧಿಯಿಂದ ಜೀವ ಸಂಕುಲಕ್ಕೆ ಜೀವನಾಡಿಯಾಗಿವೆ ಎಂದು ಉಜ್ಜಯಿನಿ ಪೀಠದ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾದೀಶ್ವರರಾದ ರಾಜ ದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಮೂಡಲ ಮಾಚಿಕೆರೆ ಗ್ರಾಮದ ಕೆ–ರೆಗೆ ಬಾಗಿನ ಅರ್ಪಿಸಿ ನಂತರ ಅವರು ಆಶೀರ್ವಚನ ನೀಡಿದರು.

ಜಗಳೂರು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಕುಡಿಯಲೂ ಸಹ ನೀರು ಲಭ್ಯವಿರುತ್ತಿರಲಿಲ್ಲ. ಇದೀಗ 57 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಡಿ ಬಹುತೇಕ ಕೆರೆಗಳು ಮೈದುಂಬಿ ಹರಿಯುತ್ತಿವೆ. ಇದ–ರಿಂದ ಪಾಳು ಬಿದ್ದಿದ್ದ ರೈತರ ಬೋರ ವೆಲ್ ಗಳು ಮರುಪೂರಣಗೊಳ್ಳುತ್ತಿವೆ. ನೀರು ಮನುಷ್ಯನಿಗೆ ಅತಿ ಮುಖ್ಯವಾದ ದ್ರವ ವಾಗಿದ್ದು ಜಲಸಂಪನ್ಮೂಲವನ್ನು ಮಿತವಾಗಿ ಬಳಕೆ ಮಾಡಿಕೊಳ್ಳಬೇಕು. ಗ್ರಾಮಕ್ಕೊಂದು ಕೆರೆಯನ್ನು ನಿರ್ಮಿಸುವುದರ ಉದ್ದೇಶ ಈ ಭಾಗದ ಜನ ಜಾನುವಾರುಗಳಿಗೆ ನೀರು ದೊರೆಯುವುದರೊಂದಿಗೆ ಅಂತರ್ಜಲ ಅಭಿವೃದ್ಧಿಯಾಗಿ ರೈತರ ಬಾಳು ಹಸನಾಗಲಿದೆ ಉಜ್ಜಯಿನಿ ಪೀಠಕ್ಕೂ ಬರದ ನಾಡ ಜಗಳೂರಿಗೂ ಅವಿನಾಭಾವ ಸಂಬಂಧವಿದ್ದು ತಾಲೂಕಿನಲ್ಲಿ ಸಾವಿರಾರು ಮಂದಿ ಮಠದ ಭಕ್ತರಿದ್ದು ಅವರ ಕರೆಯ ಮೇರೆಗೆ ತಾಲೂಕಿನಲ್ಲಿ ನಡೆಯುವಂತಹ ಕಾರ್ಯಕ್ರಮಗಳಿಗೆ ಭಾಗವಹಿಸುತ್ತೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಮನುಷ್ಯನಾಗಿ ಹುಟ್ಟಿದ ಮೇಲೆ ನಾವೆಲ್ಲರೂ ಶ್ರಮಜೀವಿಗಳಾಗಿ ಜೀವನ ಸಾಗಿಸಬೇಕು. ದುಡಿಮೆಯ ಒಂದು ಭಾಗವನ್ನು ದಾನ,ಧರ್ಮಮಾಡಬೇಕು.ದಾನದ ಗುಣ ಮೈಗೂಡಿಸಿಕೊಂಡು ಉಳ್ಳವರು ಇಲ್ಲದವರಿಗೆ ಆರ್ಥಿಕ ನೆರವಾದರೆ ಅದು ದೇವರಿಗೆ ಸಮರ್ಪಿಸಿದಂತಾಗುತ್ತದೆ. ಕೆರೆಗಳಲ್ಲಿ ಒಂದು ಬೊಗಸೆ ನೀರು ದೊರೆಯದಂತಹ ಸ್ಥಿತಿ ತಾಲೂಕಿನಲ್ಲಿ ಈ ಹಿಂದೆ ಇತ್ತು ಈಗ ಕೆರೆಗಳು ಕೋಡಿ ಬೀಳುತ್ತಿವೆ. ಇದಕ್ಕೆ ಭಗವಂತನ ಆಶೀರ್ವಾದವೇ ಸಾಕ್ಷಿಯಾಗಿದೆ. ಗ್ರಾಮಸ್ಥರು ಕೆರೆಗಳನ್ನು ಸಂರಕ್ಷಿಸಬೇಕು ಎಂದು ಕಿವಿಮಾತು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಮದ್ಯಪಾನ, ಧೂಮಪಾನ, ತಂಬಾಕು ಸೇವನೆ ಸೇರಿದಂತೆ ಮೊಬೈಲ್ ಗೆ ದಾಸರಾಗುತ್ತಿದ್ದು, ತಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಂಡು ಉಜ್ವಲ ಭವಿಷ್ಯಕ್ಕೆ ಸಂಚಕಾರ ತಂದುಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಕಳವಳಗೊಂಡರು.

ಈ ಸಂದರ್ಭದಲ್ಲಿ ಬಸವೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ದಳಪತಿ ವೀರಣ್ಣ, ವಿಎಸ್‌ಎಸ್‌ಎನ್. ಮಾಜಿ ಅಧ್ಯಕ್ಷರಾದ ಮಂಜುನಾಥ್, ನಿವೃತ್ತ ಮುಖ್ಯ ಶಿಕ್ಷಕ ಚನ್ನಬಸಪ್ಪ , ಮುಖಂಡರುಗಳಾದ ತಿಪ್ಪೇಸ್ವಾಮಿ ಬಸವರಾಜ್, ಶರಣಪ್ಪ ,ಜಯಣ್ಣ ಚಂದ್ರಪ್ಪ,, ತಿಪ್ಪೇಸ್ವಾಮಿ ,ಪ್ರಕಾಶ್ ನಿಂಗಪ್ಪ, ಈಶ್ವರಪ್ಪ ,ಬಸವರಾಜಪ್ಪ ಪ್ರಕಾಶ್ ,ಗಂಗಮ್ಮ ಅಂಗಡಿ, ರತ್ನಮ್ಮ ,ಅನಿತಾ ಗಂಗಾ ,ಸೌಭಾಗ್ಯಮ್ಮ , ಮಹಾಂತೇಶ್, ಮನು ಸೇರಿದಂತೆ ಮತ್ತಿತರರು ಹಾಜರಿದ್ದರು

# ಬಿದರಕೆರೆಯಲ್ಲಿ ವೈಭವ ಗುರುಸಿದ್ದೇಶ್ವರ ಸ್ವಾಮಿ ರಥೋತ್ಸವ



ದಾ.ನಗರವಾಣಿ ಸುದ್ದಿ

ಜಗಳೂರು,ಫೆ.22:ತಾಲ್ಲೂಕಿನಬಿದರಕೆರೆಗ್ರಾಮದಲ್ಲಿ ಗುರುಸಿದ್ದೇಶ್ವರ ಸ್ವಾಮಿಯ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ಜರುಗಿತು.

ಗ್ರಾಮದ ಆರಾಧ್ಯ ದೈವವಾದ ಶ್ರೀ ಗುರು ಸಿದ್ದೇಶ್ವರ ಸ್ವಾಮಿಯ ದೊಡ್ಡ ರಥೋತ್ಸವದಲ್ಲಿ ಪ್ರತಿ ವರ್ಷದಂತೆ ಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನಡೆಸಿ ರಥದ ಚಕ್ರಗಳಿಗೆ ಹಣ್ಣು, ಕಾಯಿ ಸಮರ್ಪಿಸಿ ನಂತರ ಪಟದ ಹರಾಜು ಪ್ರಕ್ರಿಯೆಯಲ್ಲಿ ತಾಲೂಕು ಪಂಚಾಯತಿ ಮಾಜಿ ಸದಸ್ಯ ಬಸವರಾಜ್ ಅವರು 80,001 ರೂಪಾಯಿಗೆ ತಮ್ಮದಾಗಿಸಿಕೊಂಡರು.

ನೆರೆದಿದ್ದ ಭಕ್ತ ಸಮೂಹ ಸ್ವಾಮಿಯನ್ನು ಘೋಷಗಳೊಂದಿಗೆ ರಥವನ್ನು ಎಳೆದರು. ಸ್ವಾಮಿಯ ರಥೋತ್ಸವವನ್ನು ಮಾಡುವುದರಿಂದ ಸಕಾಲಕ್ಕೆ ಮಳೆ ಬೆಳೆಯಾಗಲಿದ್ದು, ಗ್ರಾಮ ಮತ್ತು ನೆರೆಹೊರೆಯ ಪ್ರದೇಶದಲ್ಲಿ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಲಿದೆ ಎಂಬುದು ಹಿರಿಯರ ಧಾರ್ಮಿಕ ನಂಬಿಕೆಗೆ ಸಾಕ್ಷಿಯಾಗಿದೆ.

ರಥೋತ್ಸವದಲ್ಲಿ ಭಾಗವಹಿಸಿ ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ತಾಲ್ಲೂಕಿನಲ್ಲಿ ಹಬ್ಬ, ಜಾತ್ರೆ, ರಥೋತ್ಸವಗಳಲ್ಲಿ ಭಕ್ತರು ಭಕ್ತಿ ಪರ್ವ ಮೆರೆಯುವುದಲ್ಲದೆ, ಕುಟುಂಬ, ಗ್ರಾಮದ ಒಳಿತು ಬಯಸುವುದಾಗಿದೆ.ರೈತಾಪಿ ವರ್ಗ, ಮಹಿಳೆಯರು, ಮಕ್ಕಳು ಸೇರಿದಂತೆ ಸಂಬಂಧಗಳ ಬೆಸುಗೆಯಿಂದ ಸಾಮರಸ್ಯತೆ ಜೀವನ ಸಾಗಿಸುತ್ತಿದ್ದಾರೆ. ಬಿದರ–ಕೆರೆ ಗ್ರಾಮದಲ್ಲಿ ಗುರುಸಿದ್ದೇಶ್ವರ ಸ್ವಾಮಿ ರಥೋತ್ಸವ ವಿಶೇಷವಾಗಿದೆ ಎಂದರು.

ರಥೋತ್ಸವದಲ್ಲಿ ಬಿದರಕೆರೆ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ದಾವಣಗೆರೆ, ಚಿತ್ರದುರ್ಗ, ಚಳ್ಳಕೆರೆ ತಾಲ್ಲೂಕು ಸೇರಿದಂತೆ ಸಾವಿರಾರು ಭಕ್ತಸಮೂಹ ಭಾಗವಹಿಸಿತ್ತು.

# ಸ್ವಾಮಿಯ ಪುನರ್ ಪ್ರತಿಷ್ಠಾಪನೆ



ದಾ ನಗರವಾಣಿ ಸುದ್ದಿ

ಹರಿಹರ: ನಗರದ ರಾಘವೇಂದ್ರ ಮಠದ ಆವರಣದಲ್ಲಿರುವ ಪಂಚಮುಖಿ ಅಂಜನೇಯಸ್ವಾಮಿ ದೇವಸ್ಥಾನದಲ್ಲಿ ಫೆ.25ರಂದು ಪಂಚಮುಖಿ ಅಂಜನೇಯ ಸ್ವಾಮಿಯ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮಆಯೋಜನೆ ಮಾಡಲಾಗಿದೆ.

ಮಂದರ್ತಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀಪತಿ ಅಡಿಗರವರ ನೇತೃತ್ವದಲ್ಲಿ ಪಂಚಮುಖಿ ಅಂಜನೇಯ ಸ್ವಾಮಿಯ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ಅಂಗವಾಗಿ ಫೆ.25ರ ಬುಧವಾರ ಬೆಳಗ್ಗೆ 8 ಗಂಟೆಯಿಂದ ಪ್ರತಿಷ್ಠಾವಿಧಿ, ಜೀವ ಕುಂಭಾಭಿಷೇಕ, ತತ್ವಕಲಶ ಸ್ಥಾಪನೆ, ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ ಹಾಗೂ 8.30ಕ್ಕೆ ಸಲ್ಲುವ ಮೀನ ಲಗ್ನದಲ್ಲಿ ಪುನರ್ ಪ್ರತಿಷ್ಠಾಪನೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಫೆ–26ರ ಗುರುವಾರ ಬೆಳಗ್ಗೆ 9.30 ರಿಂದ ಬ್ರಹ್ಮ ಕಲಶಾಭಿಷೇಕ, ಪ್ರಧಾನ ಹೋಮ, ಚಂಡಿಕಾ ಹೋಮ, 12.30ಕ್ಕೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆ ಸಂಜೆ 5 ರಿಂದಆಶ್ಲೇಷಾ ಬಲಿ ಪೂಜಾರಂಗ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

# ಜಾಹಿರಾತು ಕುರಿತ ಕಿರುನಾಟಕ ಸ್ಪರ್ಧೆ




ದಾ ನಗರವಾಣಿ ಸುದ್ದಿ

ಹರಿಹರ: ಆತ್ಮವಿಶ್ವಾಸ ಸೃಜನಶೀಲತೆ, ಸಂವಹನ ಕೌಶಲ್ಯ ಅಭಿವೃದ್ಧಿ, ಮಾತಿಲ್ಲದೆ ಭಾವ ಪ್ರಕಟಣೆ, ತಂಡದ ಕಾರ್ಯ, ಸಾಮಾಜಿಕ ಜಾಗೃತಿ, ವೇದಿಕೆಯ ಭಯ ನಿವಾರಣೆಗಾಗಿ ಸಮೀಪದ ಕುಮಾರಪಟ್ಟಣಂನ ಅಮೃತ ವರ್ಷಿಣಿ ವಿದ್ಯಾಲಯದಲ್ಲಿ ಶುಕ್ರವಾರ 6 ರಿಂದ 9ನೇ ವಿದ್ಯಾರ್ಥಿಗಳಿಗೆ ಮೂಕಾಭಿನಯ ಹಾಗೂ ಜಾಹೀರಾತುಗಳ ಕಿರು ನಾಟಕ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮೂಕಾಭಿನಯದಲ್ಲಿ ಮದ್ಯಪಾನ ಸೇವನೆಯಿಂದ, ಮೊಬೈಲ್‌ಗಳಿಂದಾಗುವ ಅನಾಹುತಗಳು, ಶಿಕ್ಷಣದ ಮಹತ್ವ, ಪರಿಸರ ಜಾಗೃತಿ, ಕಾಳಿಂಗಮರ್ದನ, ಸಾಂಸ್ಕೃತಿಕ ಭಾರತ, ಮಾದಕ ವಸ್ತು ಸೇವನೆ, ಸಮುದ್ರ ಮಂಥನ, ಮಹಿಳೆಯರ ಸಬಲೀಕರಣ, ಆಪರೇಷನ್ ಸಿಂಧೂರ, ಯೋಧರ ಸಾಧನೆ ಇತ್ಯಾದಿ ವಿಷಯಗಳ ಬಗ್ಗೆ ಅಣಕು ಪ್ರದರ್ಶನ ನೀಡಿದರು.

ಜಾಹೀರಾತು ವಿಭಾಗದಲ್ಲಿ ಗುಡ್‌ನೈಟ್, ಡೇರಿ ಮಿಲ್ಕ್, ತುಪ್ಪ, ರಿನ್, ಸಂತೂರ್, ಬೂಸ್ಟ್, ಕ್ಲಿನಿಕ್ ಪ್ಲಸ್ ಸೇರಿದಂತೆ ವಿವಿಧ ಜಾಹಿರಾತುಗಳನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲುವಂತೆ ಮಾಡಿದರು.

# ಹರಿಹರ ತಾ॥ ದಲಿತ ಸಂಘರ್ಷ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ



ದಾ ನಗರವಾಣಿ ಸುದ್ದಿ

ಹರಿಹರ: ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಸದಸ್ಯರ ಸಭೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ) ಹರಿಹರ ತಾಲ್ಲೂಕು ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಾಲ್ಲೂಕು ಸಂಘಟನಾ ಸಂಚಾಲಕರಾಗಿ ಚೌಡಪ್ಪ ಸಿ.ಭಾನುವಳ್ಳಿ, ಎಂ.ಎಸ್.ಮಂಜುನಾಥ ಕೊಕ್ಕನೂರು, ಸುರೇಶ್ ಡಿ. ಕೆಂಚನಹಳ್ಳಿ, ಯುವರಾಜ್ ಹೊಸಪಾಳ್ಯ, ತಿಮ್ಮಣ್ಣ ಕಡ್ಲೆಗೊಂದಿ, ರಾಮಪ್ಪ ಹಿಂಡಸಘಟ್ಟ, ಅಲೆಮಾರಿ ಸಮುದಾಯದ ದುರ್ಗಪ್ಪ, ಧರ್ಮರಾಜ್ ಹಳ್ಳಿಹಾಳ್, ಮಂಜಪ್ಪ ಗುಳದಹಳ್ಳಿ, ವಿಜಯ ಕುಮಾರ್ ಪಿ.ಎನ್. ಕೆ.ಬೇವಿನಹಳ್ಳಿ ಆಯ್ಕೆ ಮಾಡಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘಟನೆಯ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ಗ್ರಾಮೀಣ ಭಾಗದ ಅಹಿಂದ ಸಮುದಾಯದ ಜನರು ಈಗಲೂ ಸಂಕಷ್ಟದಲ್ಲಿದ್ದಾರೆ. ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಈಗಲೂ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ.

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಂಘಟನೆಯ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪರ ಹೆಸರಿಡುವುದು, ಅವರ ಹುಟ್ಟೂರಾದ ಹರಿಹರದ ಸೂಕ್ತ ಸ್ಥಳದಲ್ಲಿ ಸ್ಮಾರಕವನ್ನು ನಿರ್ಮಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಶ್ರಮಿಸಬೇಕಿದೆ.

ಸಮುದಾಯದ ವಿದ್ಯಾರ್ಥಿಗಳು, ನವ ಉದ್ಯಮಿಗಳು, ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿ ಮಾಡಿದೆ. ಈ ಕುರಿತು ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಲು ನೂತನ ಪದಾಧಿಕಾರಿಗಳು ಶ್ರಮಿಸಬೇಕೆಂದು ಹೇಳಿದರು.

ಎಸ್.ಸಿ.ಎಸ್.ಪಿ. ಹಾಗೂ ಟಿ.ಎಸ್.ಪಿ. ಗೆ ಮೀಸಲಿಟ್ಟ ಶೇ.24.1 ರಷ್ಟು ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಬಾರದು, ದುರ್ಬಳಕೆ ತಡೆಯಲು ಸೆಕ್ಷನ್ 7ಸಿ ರದ್ದುಗೊಳಿಸುವುದು, ಗ್ಯಾರಂಟಿ ಬಳಿಸಿದ ರೂ.25 ಸಾವಿರ ಕೋಟಿ ಅನುದಾನವನ್ನು ವಾಪಸ್ ನೀಡುವುದು ಸೇರಿದಂತೆ ವಿವಿದ ಬೇಡಿಕೆಗಳಿಗಾಗಿ ಮಾ.11 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಆಯೋಜಿಸಿರುವ ಬೃಹತ್ ಪ್ರತಿಭಟನೆ ಎಲ್ಲಾ ಕಾರ್ಯಕರ್ತರು ಭಾಗವಹಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಕಾಶ್ ಎಂ.ಆರ್., ಪುನೀತ್ ಎಂ.ಎಲ್. ಮಾರುತಿ, ಚಂದ್ರು, ಈರಣ್ಣ, ಮರಿಯಾ, ವಿಶ್ವ, ಅಭಿ, ಧನುಷ್, ಅರುಣ್, ಡಿ.ಹನುಮಂತಪ್ಪ, ಪ್ರಕಾಶ್, ನಿಂಗಪ್ಪ, ದುರುಗಪ್ಪ, ವಿನಾಯಕ, ಗಿರೀಶ್, ಮಧು ಇದ್ದರು.

## ಭಾರತ ಜನಗಣತಿ–2027 ಸಮೀಕ್ಷೆಗೆ...

(1ನೇ ಪುಟದಿಂದ)

ಅನಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳದಂತೆ ಸೂಚಿಸಲಾಗಿದ್ದು, ಒಂದು ವೇಳೆ ಬದಲಾವಣೆ ಮಾಡಬೇಕಾದ ಅನಿವಾರ್ಯತೆ ಬಂದ–ರೆ, ನೇರವಾಗಿ ಬಿಇಓ ಗಳು (BEO) ಮತ್ತು ತಾಲೂಕು ಮಟ್ಟದ ಅಧಿಕಾರಿಗಳೇ ಜವಾಬ್ದಾರರಾಗುತ್ತಾರೆ. ಈ ಸಮೀಕ್ಷೆಯು ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ದಿಕ್ಸೂಚಿಯಾಗಲಿದ್ದು, ಸಿಬ್ಬಂದಿಗಳು ಯಾವುದೇ ಲೋಪದೋಷಗಳಿಲ್ಲದೆ ಸಮೀಕ್ಷೆ ನಡೆಸಬೇಕೆಂದು ತಿಳಿಸಿದರು.

ತಹಶೀಲ್ದಾರ್, ತಾಲೂಕು ಮಟ್ಟದ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಬಿ.ಸಿ.ಎಂ ಅಧಿಕಾರಿಗಳನ್ನು ಒಳಗೊಂಡ ವಾಟ್ಸ್ ಆಪ್ ಗ್ರೂಪ್ ರಚಿಸುವಂತೆ ಸೂಚಿಸಿದರು.ವರ್ಗಾವಣೆಯಾಗಿರುವವರು ಅಥವಾ ನಿವೃತ್ತರಾಗಿರುವವರ ಜಾಗಕ್ಕೆ ಬೇರೆ ಸಿಬ್ಬಂದಿಗಳನ್ನು ನೇಮಕ ಮಾಡಿ, ಅನಾರೋಗ್ಯಪೀಡಿತರು ಅಥವಾ ಗರ್ಭಿಣಿಯರು, ಹಾಲುಣಿಸುವ ತಾಯಂದಿರನ್ನು ಕೆಲಸಕ್ಕೆ ನಿಯೋಜಿಸಬಾರದು. ಡ್ರಾಪ್ ಲೆವೆಲ್ 1% ಕ್ಕಿಂತ ಕಡಿಮೆ ಇರಬೇಕು, ಈ ನಿಟ್ಟಿನಲ್ಲಿ ಗುಣಮಟ್ಟದ ಕೆಲಸ ಮಾಡಬೇಕು ಎಂದರು.

ತರಬೇತಿಯು ಮಾರ್ಚ್ 11 ರವರೆಗೂ ನಡೆಯಲಿದೆ. ಕ್ಷೇತ್ರ ಅಧಿಕಾರಿಗಳಿಗೆ ಫೆಬ್ರವರಿ ಅಂತ್ಯ ಅಥವಾ ಮಾರ್ಚ್‌ನ ಮೊದಲ ವಾರದೊಳಗೆ ತರಬೇತಿ ನೀಡಬೇಕು, ಮತ್ತು ಮಾರ್ಚ್ 4ರೊಳಗೆ ಎಲ್ಲಾ ಕೆಲಸಗಳು ಪೂರ್ಣಗೊಳ್ಳಬೇಕು. ಮಾನವ ಸಂಪನ್ಮೂಲದ ಗುಣಮಟ್ಟ ಬಹಳ ಮುಖ್ಯ. ಯಾರು ಆರ್ಥಿಕ ಸರ್ವೆ ಮಾಡಿದರೋ ಅವರನ್ನೇ ನೇಮಿಸಿಕೊಳ್ಳುವುದು ಅನುಕೂಲಕರ. ಪ್ರತಿ ಬ್ಲಾಕ್‌ನಲ್ಲಿ ಕನಿಷ್ಠ ಇಬ್ಬರು ಎಣಿಕೆದಾರರನ್ನು ನೇಮಿಸಬೇಕು. ಮನೆಪಟ್ಟಿ ಮಾಡುವಾಗ ಸರಿಯಾಗಿ ಮ್ಯಾಪಿಂಗ್ ಮಾಡಬೇಕು. ಈ ಮಾಹಿತಿಯನ್ನು ಎಕ್ಸೆಲ್ ಶೀಟ್‌ನಲ್ಲಿ ಸಿದ್ಧವಿಟ್ಟುಕೊಳ್ಳಬೇಕು ಎಂದು ತಿಳಿಸಿದರು. ಸಭೆಯಲ್ಲಿ ಉಪವಿಭಾಗಾಧಿಕಾರಿ ಸಂತೋಷ್ ಪಾಟೀಲ್, ಮಹಾನಗರ ಪಾಲಿಕೆ ಆಯುಕ್ತ ಮಹಾಂತೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರೇಣುಕಾ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ನೀಲಾ, ಡಿಡಿಪಿಐ ಕೊಟ್ರೇಶ್, ಜನಗಣತಿ ನೋಡಲ್ ಅಧಿಕಾರಿ ವಿವೇಕ್ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಆನ್ಲೈನ್ ಮೂಲಕ ಉಪಸ್ಥಿತರಿದ್ದರು.

## ಗ್ಯಾರಂಟಿಗಳಿಂದ ಸರ್ಕಾರಕ್ಕೆ...

(1ನೇ ಪುಟದಿಂದ)

ಇದರಿಂದ ಹೊರೆಯಾಗುತ್ತಿರಬಹುದು, ಆದ್ರೆ ನಿಮಗೆ ಮಾನಸಿಕವಾಗಿ ಧೈರ್ಯ ತುಂಬಲು ಹಾಗೂ ಆರ್ಥಿಕವಾಗಿ ಶಕ್ತಿ ತುಂಬಲು ಇಂತಹ ದೊಡ್ಡ ತೀರ್ಮಾನವನ್ನ ನಮ್ಮ ಸರ್ಕಾರ ಮಾಡಿದೆ ಎಂದು ಹೇಳಿದರು. ಜೇಬಲ್ಲಿ 10 ರೂಪಾಯಿ ಇದ್ರೆ ಕೊಡೋನು 100 ರೂಪಾಯಿ ಕೊಡೋಕೆ ಮುಂದೆ ಬರ್ತಾನೆ. ಆದ್ದರಿಂದ ಸರ್ಕಾರಕ್ಕೆ ಹೊರೆಯಾದ್ರೂ ಗ್ಯಾರಂಟಿಗಳನ್ನ ಜಾರಿಗೊಳಿಸಿದೆ ಎಂದರು.

## 2 ದಿನ ಜಿಲ್ಲೆಯಲ್ಲಿ ಸಂಚಾರ ಗಣತಿ

ದಾವಣಗೆರೆ,ಫೆ.23 : ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ 2 ದಿನಗಳ ಕಾಲ ವಾಹನ ಸಂಚಾರಗಣತಿಯನ್ನು ಆಯೋಜಿಸಲಾಗಿದೆ. ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಫೆ.26 ರಿಂದ 28 ರವರೆಗೆ ಬೆಳಿಗ್ಗೆ 6 ಗಂಟೆಯಿಂದ ಸತತವಾಗಿ 2 ದಿನಗಳ ಕಾಲ ವಾಹನ ಸಂಚಾರ ಗಣತಿಯನ್ನು ಹೆಚ್.ಡಿ.ಸಿ.ಸಿ ಕ್ಯಾಮರ ಮುಖಾಂತರ ಕೈಗೊಳ್ಳಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

# ಹರಪನಹಳ್ಳಿ ಕೃಷಿ ಮಾರುಕಟ್ಟೆಯಲ್ಲಿ ರಾಗಿ ಖರೀದಿ ಕೇಂದ್ರ ಉದ್ಘಾಟನೆ



ದಾ ನಗರವಾಣಿ ಸುದ್ದಿ

ಹರಪನಹಳ್ಳಿ: ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೆರೆದಿರುವ ರಾಗಿ ಖರೀದಿ ಕೇಂದ್ರವನ್ನು ತಹಶೀಲ್ದಾರ್ ಬಿ.ವಿ.ಗಿರೀಶ್ ಬಾಬು ಸೋಮವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು 2025–26ನೇ ಸಾಲಿನಲ್ಲಿ ಪ್ರತಿ ಕ್ವಿಂಟಲ್‌ಗೆ 4,886 ರೂ. ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಮಾಡಲಾಗುತ್ತಿದೆ, ಪ್ರತಿ ಎಕರೆಗೆ 10 ಕ್ವಿಂಟಲ್‌ನಂತೆ ಒಬ್ಬ ರೈತರಿಂದ ಗರಿಷ್ಠ 50 ಕ್ವಿಂಟಲ್ ರಾಗಿ ಖರೀದಿಸಲಾಗವುದು ಎಂದು ಹೇಳಿದರು.

ಖರೀದಿ ಪ್ರಕ್ರಿಯೆಯಲ್ಲಿ ಪಾರದರ್ಶತೆ ಹಾಗೂ ಗುಣಮಟ್ಟಕ್ಕೆ ಆದ್ಯತೆ ನೀಡಲಾಗುತ್ತಿದೆ ಆದ್ದರಿಂದ ನೋಂದಣಿಯಾದ ರೈತರು ಶುದ್ಧವಾದ ರಾಗಿ ನೀಡಿ ಸರ್ಕಾರದ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು.

ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಿಲ್ಲಾ ವ್ಯವಸ್ಥಾಪಕ ಗುರಪ್ಪ ಕನ್ನೂರು ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಮಾಡಲಾಗವುದು ತಾಲೂಕಿನಲ್ಲಿ 4,199 ರೈತರು ನೋಂದಣಿಯಾಗಿದ್ದು 1.25 ಲಕ್ಷ ಕ್ವಿಂಟಲ್ ಖರೀದಿ ಮಾಡಲಾಗುವುದು ಎಂದು ತಿಳಿಸಿದರು.

ತಾಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಶ್ರೀಕಾಂತ್ ಗುಳೇದ ವರ್ತಕ ಮಟ್ಟಿ ಮಂಜುನಾಥ, ನಂದಿಬೇವೂರು ನರೇಶಪ್ಪ, ಬಸವರಾಜ, ಹಮಾಲರ ಸಂಘದ ಮುಂಖಡ ತಿಂದಪ್ಪ ತಳವಾರ, ವೆಂಕಟೇಶ, ಕವಸರ ನಾಗರಾಜ್, ನಿಂಗಪ್ಪ, ಅಂಜಿನಪ್ಪ, ನಾಗರಾಜ್ ಸೇರಿದಂತೆ ಇತರರು ಇದ್ದರು.




ದಾವಣಗೆರೆ : ನಗರದ ದೀಕ್ಷಿತ್ ರಸ್ತೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಸುವರ್ಣ ಮಹೋತ್ಸವದ ಅಂಗವಾಗಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಗುರು ಸಾರ್ವಭೌಮರ 405 ನೇ ಪಟ್ಟಾಭಿಷೇಕದ ದಿನವಾದ ಗುರುವಾರದಂದು ನಗರದ ನಮನ ಅಕಾಡೆಮಿ ಗುರುಗಳಾದ ವಿದುಷಿ ಶ್ರೀಮತಿ ಮಾಧವಿ ಡಿ ಕೆ ಮತ್ತು ನಮನ ಅಕಾಡೆಮಿಯ ಶಿಷ್ಯಂದಿರು ಮನಮೋಹಕ ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ನೀಡಿದರು.



ದಾವಣಗೆರೆ : ಪತಂಜಲಿ ಯೋಗ ಕೇಂದ್ರ, ಬೆಂಗಳೂರು, ಸ್ನೇಹ ಸಂಗಮ ಯೋಗ ಬಳಗ, ಬೆಂಗಳೂರು ಈ ಸ್ಪರ್ಧೆಗೆ ವರ್ಲ್ಡ್ ಯೋಗ ಮತ್ತು ಸ್ಪೋರ್ಟ್ಸ್ ಎಜುಕೇಷನ್ ಕೌನ್ಸಿಲ್‌ನ ಸಹಕಾರದೊಂದಿಗೆ ಇತ್ತೀಚೆಗೆ ಬೆಂಗಳೂರಿನ ಲಗ್ಗೆರೆಯ ಬಸವೇಶ್ವರ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಓಪನ್ ಯೋಗಾಸನ ಚಾಂಪಿಯನ್ ಶಿಪ್‌ನಲ್ಲಿ ಶ್ಯಾಗಲೆಯ ಕುವೆಂಪು ವಿದ್ಯಾಲಯದ ಮಕ್ಕಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದರ ಪ್ರಯುಕ್ತ ಅವರು ತಂಡ ಪ್ರಶಸ್ತಿಗೆ ಭಾಜನರಾಗಿದ್ದಾರೆ.

# ಬೈಕ್ ಅಪಘಾತ: ಇಬ್ಬರ ಸಾವು

ದಾವಣಗೆರೆ.ಫೆ.25: ದಾವಣಗೆರೆ ತಾಲ್ಲೂಕಿನ ಮಳಲಕೆರೆ ಗ್ರಾಮದ ಇಬ್ಬರು ನಿವಾಸಿಗಳು ಒಂದೇ ದಿನ ಬೈಕ್ ಅಪಘಾತಗಳಲ್ಲಿ ಸಾವನ್ನಪ್ಪಿರುವ ಘಟನೆ ನಡೆದಿವೆ.

ಶ್ರೀನಿವಾಸ್(41) ಹಾಗೂ ಕುಮಾರ್ (54) ಮೃತ ದುರ್ದೈವಿಗಳು. ಶ್ರೀನಿವಾಸ್ ಎಂಬಾತ ಬಾಡಾ ಗ್ರಾಮದಿಂದ ಸ್ವಗ್ರಾಮ ಮಳಲಕರೆಗೆ ತೆರಳುವಾಗ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಈ ಬಗ್ಗೆ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಮಾರ್ ಎಂಬಾತ ಮಳಲಕೆರೆ ಗ್ರಾಮದಿಂದ ಮನೆದೇವರ ದರ್ಶನಕ್ಕೆಂದು ಜಗಳೂರು ತಾಲ್ಲೂಕಿನ ಕಾಮಗೇತನಹಳ್ಳಿಗೆ ತೆರಳುವಾಗ ದೇವಿಕೆರೆ ಗ್ರಾಮದ ಬಳಿ ವಾಹನವೊಂದು ಡಿಕ್ಕಿಯಾಗಿ ಕುಮಾರ್ ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಈ ಬಗ್ಗೆ ಬಿಳಿಚೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

## ದಿನಕ್ಕೊಂದು ಚುಟುಕು

ಅರ್ಥವರಿಯದ ಅಂಗಳದೊಳು
ವ್ಯರ್ಥದಿಹ ಚರ್ಚೆಯೊಳು
ನೈತಿಕತೆಯರಿದ ನಿನ್ನೊಳು
ನಿರೀಕ್ಷೆಗಳೇನಿಹುದು ಸಮಾಜದೊಳು

– ಡಾ. ಮಮು

## ದಿನಕ್ಕೊಂದು ನುಡಿ ಮುತ್ತು

ಪಂಜರದಲ್ಲಿ ಇರುವ
ಕುರಿ ಕೋಳಿಗಳು ನಾಳೆ
ಸಾಯುತ್ತೇವೆ ಎಂದು ಗೊತ್ತಿದ್ದರೂ
ಚಿಂತೆ ಇಲ್ಲದೆ ಹಾಯಾಗಿರುತ್ತವೆ.
ನಾಳೆ ಏನಾಗುವುದೋ ಎಂದು
ಚಿಂತೆಯಲ್ಲಿ ಕಳೆಯುವ ಬದಲು
ಇಂದಿನ ಖುಷಿಯನ್ನು
ಅನುಭವಿಸುತ್ತಾ ಚಿಂತೆ ಮರೆತು
ಸುಖವಾಗಿರೋದನ್ನು ಕಲಿತಾಗ
ಜೀವನ ಚೇತೋಹಾರಿಯಾಗಿರುತ್ತದೆ.

– ಮಂಜುಳಾ ಪ್ರಸಾದ್ ದಾವಣಗೆರೆ

ನಗರವಾಣಿ ದಾವಣಗೆರೆ
ಫೆಬ್ರವರಿ 26, 2026
ಗುರುವಾರ,
ಪುಟ–3
ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186

# ಯಶಸ್ಸು ನಿಮ್ಮದೇ...

**ಪರೀಕ್ಷೆಯಲ್ಲೂ, ಜೀವನದಲ್ಲೂ....** ಮಾಲಿಕೆ-09



**ದಾವಣಗೆರೆ ನಗರವಾಣಿ ವಿದ್ಯಾರ್ಥಿ ಮಾರ್ಗದರ್ಶಿ**

## ಇದ್ದರೆ ನಿಮ್ಮಲ್ಲಿ M.O.M, ನಿಮ್ಮ ನೆನಪಿನ ಶಕ್ತಿ ಆಗುತ್ತದೆ WOW



ಜಗನ್ನಾಥ ನಾಡಿಗೇರ್
ಶೈಕ್ಷಣಿಕ ಸಲಹೆಗಾರರು

ರಮೇಶ್ ತನ್ನ ವಿಜ್ಞಾನ ಪುಸ್ತಕವನ್ನು ಮುಚ್ಚಿ, ಹತಾಶೆಯಿಂದ ತಲೆ ಮೇಲೆ ಕೈಹೊತ್ತು ಕುಳಿತಿದ್ದ. ದಿವ್ಯ ತಾನು ಬರೆದಿದ್ದ ನೋಟ್ಸ್‌ನ್ನು ಪದೇ ಪದೇ ಓದುತ್ತಿದ್ದರೂ, ಅವಳ ಕಣ್ಣುಗಳಲ್ಲಿ ಆತಂಕವಿತ್ತು. ರಾಮಮೂರ್ತಿ ಸರ್ ಅವರಿಬ್ಬರ ಬಳಿ ಬಂದರು. "ಸರ್, ನನ್ನ ಮೆದುಳು ಒಂದು ತೂತಾದ ಬಿಂದಿಗೆ ಇದ್ದ ಹಾಗೆ ಆಗಿದೆ! ನಿನ್ನೆ ರಾತ್ರಿಯಿಡೀ ಕಷ್ಟಪಟ್ಟು ಓದಿದ್ದೆ, ಇವತ್ತು ಬೆಳಿಗ್ಗೆ ಎದ್ದು ನೋಡಿದರೆ ತಲೆಯಲ್ಲಿ ಒಂದಕ್ಷರವೂ ಇಲ್ಲ. ಪೂರ್ತಿ ಖಾಲಿ ಅನಿಸುತ್ತಿದೆ. **ನನಗೇನಾದರೂ ಮರೆವಿನ ಕಾಯಿಲೆ ಇದೆಯಾ ಸರ್?**" ರಮೇಶ ಕೇಳಿದ. "ಹೌದು ಸರ್, ನನಗೂ ಅದೇ ಪ್ರಾಬ್ಲಮ್. ಮೂರು ಸಲ ರಿವಿಷನ್ ಮಾಡಿದೀನಿ. ಆದರೆ ಎಕ್ಸಾಮ್ ಹಾಲ್‌ನಲ್ಲಿ ಪ್ರಶ್ನೆ ನೋಡಿದ ತಕ್ಷಣ ಉತ್ತರ ಮರೆತುಹೋಗುತ್ತೆ. **ನನ್ನ ನೆನಪಿನ ಶಕ್ತಿ (Memory power) ಯಾಕೆ ಇಷ್ಟು ವೀಕ್ ಇದೆ ಸರ್?**" ದಿವ್ಯ ಆತಂಕ ಮತ್ತು ನೋವು ಮಿಶ್ರಿತ ಧ್ವನಿಯಲ್ಲಿ ಕೇಳಿದಳು.

ರಾಮಮೂರ್ತಿ ಸರ್ ನಗುತ್ತಾ ಅವರಿಬ್ಬರ ಪಕ್ಕದಲ್ಲಿ ಕುಳಿತರು. "ಮಕ್ಕಳೇ, ನಿಮ್ಮಿಬ್ಬರ ನೆನಪಿನಶಕ್ತಿಗೆ ಏನೂ ಆಗಿಲ್ಲ. ಜಗತ್ಪ್ರಸಿದ್ಧ ಮೆದುಳಿನ ತರಬೇತುದಾರ (Brain Coach) ಜಿಮ್‌ಕ್ವಿಕ್ ಒಂದು ಮಾತು ಹೇಳುತ್ತಾರೆ– 'ಜಗತ್ತಿನಲ್ಲಿ ಒಳ್ಳೆಯ ಮೆಮೊರಿ ಅಥವಾ ಕೆಟ್ಟ ಮೆಮೊರಿ ಅಂತ ಯಾವುದೂ ಇಲ್ಲ; ಇರುವುದು ಕೇವಲ ತರಬೇತಿ ಪಡೆದ (Trained) ಮತ್ತು ತರಬೇತಿ ಪಡೆಯದ (Untrained) ಮೆಮೊರಿ ಮಾತ್ರ!' ಮರೆವು (Forgetting) ಎಂಬುದು ಕಾಯಿಲೆಯಲ್ಲ, ಅದು ನಿಮ್ಮ ಮೆದುಳಿಗೆ ಸರಿಯಾದ ತರಬೇತಿ ಇಲ್ಲದಿರುವುದರ ಲಕ್ಷಣವಷ್ಟೇ."

ರಮೇಶ್ ಆಶ್ಚರ್ಯದಿಂದ, "ಅಂದರೆ, ನಾವು ಓದುವ ವಿಧಾನವೇ ತಪ್ಪಾಗಿದೆಯಾ ಸರ್? ಆ ಟ್ರೇನಿಂಗ್ ಏನು?" ಎಂದು ಕೇಳಿದ. ರಾಮಮೂರ್ತಿ ಸರ್ ವಿವರಿಸಲು ಶುರುಮಾಡಿದರು: " ನಿಮ್ಮ ನೆನಪಿನ ಶಕ್ತಿಯನ್ನು ನೂರರಷ್ಟು ಹೆಚ್ಚಿಸಲು M.O.M ಎಂಬ ಮೂರು ಅಕ್ಷರಗಳ ಬ್ರಹ್ಮಾಸ್ತ್ರ ನಿಮ್ಮ ಬಳಿ ಇರಬೇಕು. ಬನ್ನಿ, ಅದೇನೆಂದು ತಿಳಿದುಕೊಳ್ಳೋಣ. ನಿಮ್ಮ ಓದಿಗೆ ಅದನ್ನು ಅಳವಡಿಸೋಣ."

**1. M - Motivation (ಪ್ರಬಲವಾದ ಕಾರಣ / ಆಸಕ್ತಿ)**

"ದಿವ್ಯ, ನಿನ್ನ ವಿಜ್ಞಾನ ಪುಸ್ತಕದ ಆ ಕಷ್ಟದ ಕೆಮಿಕಲ್ ಫಾರ್ಮುಲಾವನ್ನು ನೀನು ನೆನಪಿಟ್ಟುಕೊಂಡರೆ, ನಾನು ನಿನಗೆ 1 ಲಕ್ಷ ರೂಪಾಯಿ ಬಹುಮಾನ ಕೊಡುತ್ತೇನೆ ಎಂದು ಊಹಿಸಿಕೊ. ಆಗ ನೀನು ಅದನ್ನು ಮರೆಯುತ್ತೀಯಾ?" ರಾಮಮೂರ್ತಿ ಸರ್ ಕೇಳಿದರು. "ಖಂಡಿತಾ ಇಲ್ಲ ಸರ್! ಒಂದು ಲಕ್ಷ ಸಿಗುತ್ತೆ ಅಂದ್ರೆ ಕಷ್ಟಪಟ್ಟಾದರೂ ಆ ಫಾರ್ಮುಲಾವನ್ನು ತಲೆಯಲ್ಲಿ ಸೇರಿಸಿಕೊಳ್ತೀನಿ" ದಿವ್ಯ ನಗುತ್ತಾ ಹೇಳಿದಳು.

ರಾಮಮೂರ್ತಿ ಸರ್ ಹೇಳಿದರು "ನೋಡಿದ್ಯಾ! ನಿನ್ನ ಮೆದುಳು ವೀಕ್ ಇಲ್ಲ. ಆದರೆ ಆ ಪಾಠ ಓದಲು ನಿನಗೆ 'ಬಲವಾದ ಕಾರಣ' ಇಲ್ಲ ಅಷ್ಟೇ. ನಿನ್ನ ಮೆದುಳಿಗೆ ಇದನ್ನು **'ಯಾಕೆ ಓದಬೇಕು?'** (Why) **ಅನ್ನೋದು ಸ್ಪಷ್ಟವಾದರೆ, 'ಹೇಗೆ ನೆನಪಿಡಬೇಕು?'** (How) ಅನ್ನೋದು ತಾನಾಗಿಯೇ ಬರುತ್ತದೆ. "ಮೆದುಳಿನ ನಿಯಮ ಬಹಳ ಸರಳ ದಿವ್ಯ," ಸರ್ ಮುಂದುವರಿಸಿದರು...

"ಅದು ಕೇವಲ ಎರಡು ವಿಷಯಗಳನ್ನು ಮಾತ್ರ ಬಹಳ ಚೆನ್ನಾಗಿ ನೆನಪಿಟ್ಟುಕೊಳ್ಳುತ್ತದೆ **ಒಂದನೆಯದು** ಯಾವುದರಿಂದ ನಮಗೆ 'ಅಪಾಯ' ಇದೆಯೋ ಅದನ್ನು ಅಥವಾ ತುಂಬಾ ದುಃಖ ಆಗಿದೆಯೋ ಅದನ್ನು. **ಎರಡನೆಯದು,** ಯಾವುದರಿಂದ ನಮಗೆ 'ಭಾರಿ ಲಾಭ ಅಥವಾ ಖುಷಿ' (Reward) ಸಿಗುತ್ತದೆಯೋ ಅದನ್ನು.

ಆದ್ದರಿಂದ, ಓದುವ ಮುನ್ನ ನಿಮಗೆ ನೀವೇ ಒಂದು ಸಣ್ಣ ಸಂತೋಷವನ್ನು/ಖುಷಿಯನ್ನು ನಿಗದಿಪಡಿಸಿಕೊಳ್ಳಿ. ನೀವು ಈ ಬೋರ್ಡ್ ಪರೀಕ್ಷೆಯಲ್ಲಿ **ಅತ್ಯಂತ ಹೆಚ್ಚು ಅಂಕಗಳಿಸಿದರೆ, ರ್‍ಯಾಂಕ್ ಬಂದರೆ ನಿಮ್ಮ ತಾಯಿ-ತಂದೆಯರಿಗೆ, ಶಿಕ್ಷಕರಿಗೆ ಆಗುವ ಆನಂದವನ್ನು ಕಲ್ಪಿಸಿಕೊಳ್ಳಿ. ನಿಮ್ಮ ಗೌರವ ಹೆಚ್ಚುವುದನ್ನು ಅಥವಾ ನಿಮ್ಮ ಮುಂದಿನ ವ್ಯಾಸಂಗಕ್ಕೆ ಉಚಿತ ಸೀಟು ಅಥವಾ ಶುಲ್ಕರಿಯಾಯತಿ ದೊರೆತರೆ ಆಗುವ ಪ್ರಯೋಜನ, ಉಳಿಯಬಹುದಾದ ಹಣ, ಹೆಚ್ಚುವ ನಿಮ್ಮ ಕೀರ್ತಿ ಎಲ್ಲವನ್ನೂ ಕಣ್ಮುಂದೆ ತಂದುಕೊಳ್ಳಿ,** ಅವೆಲ್ಲವೂ ಆದಂತೆ ಭಾವಿಸಿರಿ. ನಿಮ್ಮ ಮೆದುಳಿನಲ್ಲಿ ಉತ್ಸಾಹ ತುಂಬಿ, ಪಾಠ ಬೇಗ ಮತ್ತು ಶಾಶ್ವತವಾಗಿ ನೆನಪಿನಲ್ಲಿ ಉಳಿಯುವಂತೆ ಮಾಡುತ್ತದೆ." ಇದನ್ನು ಹೇಳುವಾಗ ಸರ್ ಅವರ ಕಣ್ಣಲ್ಲೂ, ಹೊಳಪು ಕಾಣುತ್ತಿತ್ತು. ದಿವ್ಯನ ಕಣ್ಣಲ್ಲಿ ಅದೇಕೋ ಸ್ವಲ್ಪ ನೀರು ತುಂಬಿತ್ತು.


**2. O - Observation (ಗಮನ / ವೀಕ್ಷಣೆ)**

"ಇದು ಮರೆವಿನ ಕಾಯಿಲೆ ಅಲ್ಲ ರಮೇಶ್. ಇದು 'ಗಮನದ ಕೊರತೆ' (Lack of Observation). ಗಮನವಿಲ್ಲದೆ ನೋಡಿದರೆ ಕಣ್ಣೆದುರು ಇರುವ ವಸ್ತುಗಳೂ ಕಾಣಲ್ಲ, ಇನ್ನು ಪುಸ್ತಕದ ಅಕ್ಷರಗಳು ನೆನಪುಳಿಯುತ್ತಾ? ನಿನ್ನ ಕಣ್ಣು ಪುಸ್ತಕದ ಮೇಲಿರುತ್ತದೆ, ಆದರೆ ಗಮನ ನಾಳಿನ ಮ್ಯಾಚ್ ಮೇಲೋ, ಪರೀಕ್ಷೆಯ ಟೆನ್ಷನ್ ಮೇಲೋ ಇರುತ್ತದೆ.

**ಹಾಗಾದರೆ ಏನು ಮಾಡಬೇಕು?** ಓದಲು ಆರಂಭಿಸುವ ಮೊದಲು ಕಣ್ಮುಚ್ಚಿ 3 ಬಾರಿ ದೀರ್ಘವಾಗಿ ಉಸಿರಾಡಿ, ನಿಮ್ಮ ಗಮನವನ್ನು ಉಸಿರಾಟದ ಕಡೆಗೆ ಕೊಡಿ. ಉಸಿರನ್ನು ತಗೆದುಕೊಂಡಾಗ ಆಗುವ ತಂಪು ಮತ್ತು ಉಸಿರನ್ನು ಬಿಟ್ಟಾಗ ಆಗುವ ಬಿಸಿ ಇವೆರಡರ ಅನುಭವ ಆಗುತ್ತಿದೆಯೇ? ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿ. ಬಿಸಿ–ತಂಪುಗಳ ಅನುಭವ ನಿಮಗೆ ಆಗುತ್ತಿದೆ ಎಂದರೆ, ನಿಮ್ಮ ಗಮನ ಉಸಿರಾಟದ ಕಡೆಗೆ ಇದೆ ಎಂದರ್ಥ. ನಂತರ 'ನನ್ನ ಗಮನ ಈಗ ಕೇವಲ ಈ ಪುಸ್ತಕದ ಮೇಲಿದೆ. ನಾನು ಓದಿದ್ದೆಲ್ಲವೂ ನನಗೆ ನೆನಪಿರುತ್ತದೆ" ಎಂದು ಮೆದುಳಿಗೆ ಸೂಚನೆ ಕೊಡಿ. **ನಿಮ್ಮ ಕಣ್ಣು ಮತ್ತು ಮನಸ್ಸು ಎರಡೂ ಒಂದೇ ಕಡೆ ಇದ್ದಾಗ ಮಾತ್ರ ಅದು 'ಅಧ್ಯಯನ'ವಾಗುತ್ತದೆ."**

" ಮಕ್ಕಳೇ ಮೂರನೆಯ ಅಕ್ಷರ M - Methods (ನೆನಪಿಡುವ ತಂತ್ರಗಳು) ಇವುಗಳ ಬಗ್ಗೆ ವಿವರವಾಗಿ ಆಮೇಲೆ ಹೇಳ್ತೀನಿ. ಮೊನ್ನೆ ಪ್ರಿಪರೇಟರಿ ಎಕ್ಸಾಂ ಆಯ್ತಲ್ವಾ, ಅದರ ರಿಪೋರ್ಟ್‌ನ್ನು ಕಳುಹಿಸ ಬೇಕು. ಅದಾದ ಮೇಲೆ ನಾನೇ ಬರ್ತೇನೆ. ಬಂದು ಹೇಳ್ತೀನಿ.. ನೀವು M & O ಇದನ್ನು ಪ್ರಾಕ್ಟೀಸ್ ಮಾಡ್ತಾ ಓದಿ. ಒಳ್ಳೆದಾಗ್ಲಿ ಮಕ್ಳೇ" ಸರ್ ಹೇಳಿ ಆಫೀಸಿಗೆ ಹೋದರು.

> "ಮಕ್ಕಳೇ, ಇಂದಿನಿಂದ 'ನನ್ನ ಮೆದುಳು ವೀಕ್' ಎನ್ನುವ ಸುಳ್ಳನ್ನು ನಂಬಬೇಡಿ. ನಿಮ್ಮ ಮೆದುಳಿನಲ್ಲಿ ಅಪರಿಮಿತವಾದ ಶಕ್ತಿಯಿದೆ.
> * ಓದುವುದಕ್ಕೆ ಬಲವಾದ ಆಸಕ್ತಿ ಬೆಳೆಸಿಕೊಳ್ಳಿ. * ಓದುವಾಗ ನೂರಕ್ಕೆ ನೂರು ಗಮನ ಕೊಡಿ.




# ನಾನು ಯುದ್ಧ ನಿಲ್ಲಿಸದೆ ಇದ್ದಿದ್ರೆ...

(1ನೇ ಪುಟದಿಂದ)

ಯುದ್ಧಗಳನ್ನು ನಿಲ್ಲಿಸಿದ್ದೇನೆ. ಅದ್ರಲ್ಲೂ ಪಾಕಿಸ್ತಾನ ಮತ್ತು ಭಾರತದ್ದು ಪರಮಾಣು ಯುದ್ಧವಾಗಿರುತ್ತಿತ್ತು. ನಾನು ಮಧ್ಯಸ್ಥಿಕೆ ವಹಿಸದೇ ಇದ್ದಿದ್ದರೇ ಪಾಕಿಸ್ತಾನದ ಪ್ರಧಾನಿ ಸಾಯುತ್ತಿದ್ದರು ಅಂತ 3.5 ಕೋಟಿ ಜನ ಹೇಳ್ತಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ.

ಮುಂದುವರಿದು ಕಳೆದ 9 ತಿಂಗಳಲ್ಲಿ ಅಮೆರಿಕಕ್ಕೆ ಯಾರೊಬ್ಬರೂ ಅಕ್ರಮವಾಗಿ ಪ್ರವೇಶಿಸಿಲ್ಲ. ಅಕ್ರಮ ವಲಸಿಗರ ಸಂಖ್ಯೆ ಶೂನ್ಯಕ್ಕೆ ಇಳಿದಿದೆ. ಬೇರೆ ದೇಶಗಳ ಜನರನ್ನು ಕಾನೂನುಬದ್ಧವಾಗಿ ಮಾತ್ರ ಅಮೆರಿಕಕ್ಕೆ ಪ್ರವೇಶಿಸಲು ಅನುಮತಿಸಲಾಗುತ್ತಿದೆ ಎಂದು ತಿಳಿಸಿದ್ರು.

ಅಮೆರಿಕಕ್ಕೆ ಸ್ವಾತಂತ್ರ್ಯ ಸಿಕ್ಕು ಈ ಜುಲೈ 4ಕ್ಕೆ ಎರಡೂವರೆ ಶತಮಾನ ಕಳೆಯುತ್ತಿದೆ. ಆ ಹೊತ್ತಿಗೆ ನಾವು ಭೂಮಿಯ ಮೇಲೆ ಅತ್ಯಂತ ಅದ್ಭುತ, ಅಸಾಧಾರಣ. ಪ್ರಗತಿಪರ ರಾಷ್ಟ್ರವಾಗಿ ಹೊರಹೊಮ್ಮುತ್ತೇವೆ. ಈ ವರೆಗೂ ಕಾಣದ್ದನ್ನ ದೇಶದ ಜನ ಕಾಣುತ್ತಾರೆ. ಅಲ್ಲದೇ ಈ ಹಿಂದೆ ದೇಶದಲ್ಲಿ ಹತ್ಯೆ ಪ್ರಮಾಣ ಗಮನಾರ್ಹ ಪ್ರಮಾಣದಲ್ಲಿತ್ತು. ಈಗ ಕೊಲೆ ಪ್ರಮಾಣವು ಇತಿಹಾಸದಲ್ಲಿ ಅತಿದೊಡ್ಡ ಕುಸಿತ ಕಂಡಿದೆ ಎಂದು ಶ್ಲಾಘಿಸಿದರು.

# ಚಿತ್ರದುರ್ಗ; ಮೊಬೈಲ್ ಸ್ಕ್ರೀನ್ ಹಣ ಕೇಳಿದಕ್ಕೆ ಚಾಕು ಇರಿತ

(1ನೇ ಪುಟದಿಂದ)

ಈ ವಿಚಾರ ತಿಳಿದ ಕೂಡಲೇ ಹಿಂದೂ ಸಂಘಟನೆಗಳ ಕಾರ್ಯಕರ್ತರು ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ವಿಕ್ರಮ್ ಚೌಧ್ರಿ ಹಿಂದೂ ಸಂಘಟನೆಗಳಲ್ಲಿ ಗುರುತಿಸಿಕೊಂಡಿದ್ದಕ್ಕೆ ಚಾ–ಕು ಇರಿಯಲಾಗಿದೆ. ಕೂಡಲೇ ಆರೋಪಿಯನ್ನನು ಅರೆಸ್ಟ್ ಮಾಡಬೇಕು. ಬಂಧನ ಮಾಡದೇ ಇದ್ದರೆ ನಾಳೆ ಚಿತ್ರದುರ್ಗ ಬಂದ್ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

## ವಿಮಾನಾಸನ: (ವಿಮಾನ ಭಂಗಿ



"ದೇಹದ ನಮ್ಯತೆ (Flexibility) ಮತ್ತು ಶಕ್ತಿಯನ್ನು ಹೆಚ್ಚಿಸುವ ಉತ್ತಮವಾದ ಆಸನವಾಗಿದೆ"

ಅರ್ಥ: ವಿಮಾನ' (ಹಾರುವ ವಾಹನ) ಮತ್ತು 'ಆಸನ' (ಭಂಗಿ). ಅಂದರೆ ಯೋಗದಲ್ಲಿ ಹಾರುವ ವಿಮಾನದಂತೆ ದೇಹವನ್ನು ಸಮತೋಲನದಲ್ಲಿರಿಸುವ ಭಂಗಿ.

ಮಾಡುವ ವಿಧಾನ: * ಮೊದಲ ನೇರವಾಗಿ ನಿಂತುಕೊಂಡು ಹೊಟ್ಟೆಯ ಮೇಲೆ ಮಲಗಿ. * ಉಸಿರನ್ನು ತೆಗೆದುಕೊಳ್ಳುತ್ತಾ, ಕೈಗಳು, ಎದೆ ಮತ್ತು ಕಾಲುಗಳನ್ನು ಒಂದೇ ಸಮಯದಲ್ಲಿ ಮೇಲಕ್ಕೆತ್ತಿ. * ಕೈಗಳನ್ನು ಪಕ್ಕಕ್ಕೆ ಚಾಚಿ, ವಿಮಾನದ ರೆಕ್ಕೆಗಳಂತೆ ಇರಿಸಿ, ದೃಷ್ಟಿಯು ಮುಂದಕ್ಕೆ ನೋಡುತ್ತಿರಲಿ. * ಈ ಸ್ಥಿತಿಯಲ್ಲಿ ಕೆಲವು ಸೆಕೆಂಡುಗಳ ಕಾಲ ಉಸಿರಾಡುತ್ತಾ ಇರಿ.

ಮುಕ್ತಾಯ: ಉಸಿರನ್ನು ಬಿಡುತ್ತಾ, ಮಕರಾಸನ ಸ್ಥಿತಿಗೆ ಬಂದು ವಿಶ್ರಾಂತಿ ಪಡೆಯಿರಿ.

ಉಪಯೋಗಗಳು: * ತೊಡೆಗಳು (Hamstrings), ಕಾಲುಗಳು (Calf muscles), ಮತ್ತು ಕೆಳ ಬೆನ್ನಿನ ಸ್ನಾಯುಗಳನ್ನು ಬಲಪಡಿಸುತ್ತದೆ. * ಕಿಬ್ಬೊಟ್ಟೆಯ ಸ್ನಾಯುಗಳನ್ನು ಬಲಪಡಿಸುತ್ತದೆ ಮತ್ತು ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ. * ದೇಹದ ಸಮತೋಲನ ಮತ್ತು ಭಂಗಿಯನ್ನು ಸುಧಾರಿಸುತ್ತದೆ. * ಏಕಾಗ್ರತೆಯನ್ನು ಹೆಚ್ಚಿಸುತ್ತದೆ ಮತ್ತು ಆತಂಕವನ್ನು ಕಡಿಮೆ ಮಾಡುತ್ತದೆ. * ಬೆನ್ನುಮೂಳೆಯನ್ನು ವಿಸ್ತರಿಸಿ, ಬೆನ್ನಿನ ಮೇಲ್ಭಾಗ ಮತ್ತು ಕೆಳಭಾಗದ ಭಂಗಿಯನ್ನು (Posture) ಉತ್ತಮಗೊಳಿಸುತ್ತದೆ.

ಗಮನಿಸಿ: ಬೆನ್ನುನೋವು, ಮಂಡಿ ನೋವು, ಹರ್ನಿಯಾ,ಅಲ್ಸರ ಇರುವವರು ಇದನ್ನು ಮಾಡಬಾರದು, ಅಧಿಕ ರಕ್ತದೊತ್ತಡ ಇರುವವರು ವೈದ್ಯರ ಸಲಹೆಯೊಂದಿಗೆ ಮಾಡಬೇಕು.

ಏನಾದರೂ ಸಂದೇಹಗಳಿದ್ದರೆ ಈ ನಂಬರಿಗೆ ಸಂಪರ್ಕಿಸಿ: 8762089106

> ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

# ಜಗಳೂರು: ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಆಗ್ರಹಿಸಿ ಬೆಸ್ಕಾಂ ಕಛೇರಿಗೆ ರೈತರ ಮುತ್ತಿಗೆ

ದಾ.ನಗರವಾಣಿ ಸುದ್ದಿ

ಜಗಳೂರು, ಫೆ.25: ತಾಲ್ಲೂಕಿನ ಅರಿಶಿನಗುಂಡಿ, ತೋರಣಗಟ್ಟೆ, ಜಮ್ಮಾಪುರ ಜಮೀನುಗಳಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರು ಪಟ್ಟಣದ ಬೆಸ್ಕಾಂ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ರೈತರ ಜಮೀನುಗಳಲ್ಲಿ ಕೇವಲ 5 ಗಂಟೆಗಳ ಕಾಲ ವಿದ್ಯುತ್ ಪೂರೈಕೆಯಿಂದ ಬೆಳೆಗಳಿಗೆ ಸಮರ್ಪಕ ನೀರು ಪೂರೈಕೆಯಾಗುತ್ತಿಲ್ಲ. ಬೇಸಿಗೆ ಸಮಯದಲ್ಲಿ ರೈತರ ಬೆಳೆಗಳು ಬಾಡುತ್ತಿವೆ. ಬೆಸ್ಕಾಂ ಅಧಿಕಾರಿಗಳು ಕೇವಲ ದಿನಕ್ಕೆ 5 ಗಂಟೆಗಳ ಕಾಲ ನೀಡುವ ವಿದ್ಯುತ್ ನಲ್ಲಿಯೂ ಆಗಾಗ್ಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಸ್ಕಾಂ ಇಲಾಖೆ ಎಇಇ ಮಲ್ಲಿಕಾರ್ಜುನ್ ಅವರು ಪ್ರತಿಕ್ರಿಯಿಸಿ, ವಿಂಡ್ ಫ್ಯಾನ್ ವಿದ್ಯುತ್ ಉತ್ಪಾದನೆ ಕಡಿಮೆಯಿದ್ದು ರೈತರಿಂದ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಕಾರಣ ಕಳೆದ 15 ದಿನಗಳಿಂದ ರೈತರ ಜಮೀನುಗಳಲ್ಲಿ ವಿಂಡ್ ಫ್ಯಾನ್ ಕಂಪನಿಗಳ ಒಪ್ಪಂದದ ನವೀಕರಣ ಸಮಸ್ಯೆಯಿಂದ ವಿದ್ಯುತ್ ಉತ್ಪಾದನೆ ಸಮಸ್ಯೆಯಾಗಿತ್ತು. ಇದೀಗ ಸಮಸ್ಯೆ ಇತ್ಯರ್ಥಗೊಂಡಿದೆ ಎಂದು ಮೇಲಾಧಿಕಾರಿಗಳು ತಿಳಿಸಿದ್ದಾರೆ. ಸಮರ್ಪಕವಾಗಿ ದಿನದ 5 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಪತ್ರಿಕೆಗೆ ಮಾಹಿತಿ ನೀಡಿದರು.



ಈ ಸಂದರ್ಭದಲ್ಲಿ ರೈತರಾದ ಕೃಷ್ಣಪ್ಪ, ತಿಪ್ಪೇಸ್ವಾಮಿ, ವೀರೇಶ್, ರವಿ, ಅಜಯ್ ಸೇರಿದಂತೆ ಇತರರು ಇದ್ದರು.

# ಕೆರೆ ತುಂಬಿಸುವ ಯೋಜನೆಯಿಂದ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹೆಚ್ಚಾಗುತ್ತಿದೆ: ಬಸವನಗೌಡ



ದಾ ನಗರವಾಣಿ ಸುದ್ದಿ

ಜಗಳೂರು: ಕೆರೆ ತುಂಬಿಸುವ ಯೋಜನೆಯಿಂದ ಜಗಳೂರು ತಾಲ್ಲೂಕಿನಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹೆಚ್ಚಾಗುತ್ತಿದೆ ಎಂದು ದಾವಣಗೆರೆ ಐಸಿಎಆರ್–ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಬಸವನಗೌಡ ಎಂ.ಜಿ. ಅಭಿಪ್ರಾಯಪಟ್ಟರು.

ಪರಿಶಿಷ್ಟ ಪಂಗಡ ಉಪಯೋಜನೆಯಡಿ ಬಸಪ್ಪನಹಟ್ಟಿ ಗ್ರಾಮದಲ್ಲಿ ಹಮ್ಮಿಕೊಂಡ "ಈರುಳ್ಳಿ ಬೆಳೆ ಕ್ಷೇತ್ರೋತ್ಸವ"ದಲ್ಲಿ ಮಾತನಾಡಿದ ಅವರು ಪ್ರಸ್ತುತ ತಾಲ್ಲೂಕಿನಾದ್ಯಂತ ಭೂಮಿಯ ಅಂತರ್ಜಲ ಮಟ್ಟ ಹೆಚ್ಚಾಗುತ್ತಿದ್ದು, ತೋಟಗಾರಿಕೆ ಬೆಳೆ ವಿಸ್ತೀರ್ಣ ವಿಸ್ತಾರವಾಗುತ್ತಿದೆ. ರೈತರು ಬರೀ ಅಡಿಕೆ ಬೆಳೆಯನ್ನಷ್ಟೇ ಬೆಳೆಯದೆ ತೆಂಗು, ಹಣ್ಣಿನ ಬೆಳೆಗಳು, ತರಕಾರಿ ಬೆಳೆಗಳತ್ತ ಗಮನ ಹರಿಸಬೇಕೆಂದರು.

ಈರುಳ್ಳಿಯಲ್ಲಿ ಕೇಂದ್ರದ ವತಿಯಿಂದ ನೀಡಿದ ಎನ್‌ಎಚ್‌ಆರ್‌ಡಿಎಫ್–ರೆಡ್–4 ತಳಿಯು ಹಿಂಗಾರಿನಲ್ಲಿ ಬೆಳೆಯುವ ತಳಿಯಾಗಿದ್ದು, ಎಲೆ ಮಚ್ಚೆ ರೋಗಕ್ಕೆ ನಿರೋಧಕತೆಯಿದೆ. ಬೆಳೆಯೂ ಉತ್ತಮವಾಗಿದ್ದು, ಗಡ್ಡೆಗಳು ಚೆನ್ನಾಗಿ ಬಂದಿವೆ ಹಾಗೂ ಉತ್ತಮ ಬಣ್ಣದಿಂದ ಕೂಡಿದ್ದು, ಉತ್ತಮ ಇಳುವರಿಯನ್ನು ನಿರೀಕ್ಷಿಸಿದ್ದೇವೆ ಎಂದು ರೈತರಾದ ಶ್ರೀ ಗುರುಲಿಂಗಪ್ಪನವರು ಅಭಿಪ್ರಾಯವನ್ನು ಹಂಚಿಕೊಂಡರು.

ಕೇಂದ್ರದ ಮಣ್ಣು ವಿಜ್ಞಾನಿ ಡಾ. ಪ್ರಶಾಂತ್ ಡಿ.ವಿ. ಮಾತನಾಡಿ ಬೇಸಿಗೆಯಲ್ಲಿ ಮಣ್ಣು ಪರೀಕ್ಷೆ ಮಾಡಿಸಲು ಸೂಕ್ತಕಾಲವಿದ್ದು, ಕನಿಷ್ಠ ಎರಡು ವರ್ಷಕ್ಕೊಮ್ಮೆ ತಮ್ಮ ಹೊಲದ ಆರೋಗ್ಯವನ್ನು ಪರೀಕ್ಷಿಸಿಕೊಳ್ಳಬೇಕೆಂದರು.

ಬಿದರಕೆರೆ ತರಳಬಾಳು ಅಮೃತ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಕೃಷ್ಣಮೂರ್ತಿ ಕೇಂದ್ರದ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆಯಡಿ ಸಾಕಷ್ಟು ಪರಿಕರಗಳನ್ನು ಒದಗಿಸಿದ್ದು ನಮ್ಮ ಆರ್ಥಿಕ ಜೀವನ ಸುಧಾರಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮಲ್ಲಿ ರೈತರಾದ ಶಶಿಕುಮಾರ್, ಗುರುಲಿಂಗಪ್ಪ, ಸುಧಾರಕರ್ ಹಾಗೂ 80 ಕ್ಕೂ ಹೆಚ್ಚು ರೈತರು ಹಾಜರಿದ್ದರು.

# ದೂರದಲ್ಲಿ ನಡೆಯಿತೇ ಕೋಣ ಬಲಿ? ಜಿಲ್ಲಾಡಳಿತ ನಿರಾಕರಣೆ

(1ನೇ ಪುಟದಿಂದ)

ಬಿಗಿ ಭದ್ರತೆ, ಕೈತಪ್ಪಿದ ಮಕ್ಕಳು ಪೋಷಕರ ಮಡಿಲಿಗೆ: ಇಷ್ಟು ದೊಡ್ಡ ಜಾತ್ರೆ ನಡೆದರೂ ಮೊಬೈಲ್, ಆಭರಣಗಳು ಸೇರಿದಂತೆ ಯಾವುದೇ ರೀತಿ ಕಳವುಗಳು ನಡೆದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಹಬ್ಬದ ನಿಮಿತ್ತ 1500 ಪೊಲೀಸರನ್ನು ನಿಯೋಜಿಸಲಾಗಿತ್ತು. 40 ಜನ ಮುಫ್ತಿ ಪೊಲೀಸರು ಕಾರ್ಯನಿರ್ವಹಿಸುತ್ತಿದ್ದರು. ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದರೆ ದೇವಸ್ಥಾನ ಆವರಣದಲ್ಲಿ ತೆರೆಯಲಾಗಿದ್ದ ಉಪ ಪೊಲೀಸ್ ಠಾಣೆಗೆ ಕರೆ ತಂದು ವಿಚಾರಣೆ ನಡೆಸಿ, ಅವರ ವಿವರಗಳನ್ನು ಪಡೆದು ಕಳುಹಿಸಲಾಗುತ್ತಿತ್ತು. ಕೈತಪ್ಪಿದ ಕೆಲವು ಮಕ್ಕಳನ್ನು ಪೊಲೀಸರ ಮೈಕ್‌ಗಳ ಮೂಲಕ ಕೂಗಿ ಹೇಳಿ ಪೋಷಕರ ಮಡಿಲು ಸೇರಿಸಿದರು.

# ಗಾಜಿನ ಮನೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ ಫಲಪುಷ್ಪ...

(1ನೇ ಪುಟದಿಂದ) ಬೀಗೋನಿಯಾ, ಡಯಾಂಥಸ್, ಚೆಂಡು ಹೂವು, ಸೇವಂತಿಗೆ, ಸೆಲೋಸಿಯಾ, ಅರೆಕಾ ಪಾಮ್, ರಾಫಿಸ್ ಪಾಮ್, ಯುಜೇನಿಯಾ, ಫಿಕಸ್ ಪಾಂಡಾ, ಸ್ಟಾರ್ ಲೈಟ್, ಬೊಂಬೂ ಪಾಮ್, ಕ್ರೋಟಾನ್, ಅಗೋನೆಮಾ ಐಸ್, ಗೋಲ್ಡನ್ ಸೈಪ್ರೆಸ್, ಚಾಂಪಿಯನ್ ಪಾಮ್, ಇರಾ, ಪಿಟೋಡಿಯಾ ಪಾಮ್, ಫೀನಿಕ್ಸ್, ಡೈಫೆನ್‌ಬಾಚಿಯಾ, ಬುದ್ಧ ಬಂಬೂ ಸಾಂಗ್ ಅಫ್ ಜಾಮಿಕಾ, ಡ್ರಾಕೇನಾ ಫ್ರಾಗ್ರೆನ್ಸ್, ನೋಲಿನಾ ಪಾಮ್, ಬರಡ್ ಅಫ್ ಪ್ಯಾರಡೈಸ್, ರಾಡರ್ಮಾಚರಾ, ಕ್ಯಾಲಥಿಯಾ ಲುಥಿಯಾ, ಷಾಂಪೇನ್ ಪಾಮ್, ಚೈನಾ ಆರೆ–ಂಜ್, ಕ್ಯಾಮೆಲಿಯಾ, ಇಟಾಲಿಯನ್ ಸೈಪ್ರೆಸ್, ಗೋಲ್ಡನ್ ಥುಜಾ, ಆರೆಂಜ್ ಟ್ರಂಪೆಟ್ ಕ್ರೀಪರ್, ಡ್ರಾಕೇನಾ ಆಲ್ ವೆರಿಟಿ, ಆಗೋನೆಮಾ ಸಿಲ್ವರ್, ರಿಯೋ, ಅರೆಲಿಯಾ (ಹಸಿರು, ಚಿನ್ನ), ಪಾಂಡನಸ್, ವೈಟ್ ರಿಬ್ಬನ್, ಕ್ರೋಟಾನ್, ಇಕ್ಸೋರಾ ಮಿನಿ, ಸೈಫೋರಾ, ನಂದಿ ಬಟು, ಎರಾಂಥೆಮಮ್, ಗಾಲ್ಮೀಮಿಯಾ, ಅಖಿಲಾಫಾ, ಡ್ರಾಕೇನಾ ಕೊಲೊರಾಮಾ, ಆತ್ಮನಾರ್ಥೆರಾ, ಸ್ನೋ ಬುಸ್, ಆಕಾಲಿಸ್, ಪಾರ್ಟುಲಾಕಾ, ಮಧುಕಾಮಿನಿ, ಅಲಮಂಡಾ, ಯುಜೆನಿಯಾ, ನಿಕೋಟಿನಾ, ಜೋತ್ರವ, ಯುಫೋರ್ಬಿಯಾ ಮಿಲಿ ರೆಡ್, ಚೈತ್ರಮಾಲ ಬಳಸಲಾಗಿದೆ.

ಗಾಜಿನ ಮನೆಯ ಉದ್ಯಾನವನದ ಆವರಣದಲ್ಲಿ ಅಪರೂಪದ ಅಲಂಕಾರಿಕ ಮರಗಳನ್ನು ನಾಟಿ ಮಾಡಲಾಗಿದೆ, ಈ ಎಲ್ಲಾ ಮರಗಳಿಗೆ ಮತ್ತು ಗಾಜಿನ ಮನೆಯ ಒಳಗಿನ ಭಾಗಗಳಿಗೆ ವಿವಿಧ ಬಣ್ಣಗಳ ವಿದ್ಯುತ್ ದೀಪಾಲಂಕಾರ ಮಾಡಿ ಕಾರ್ಯಕ್ರಮ ಸೊಬಗನ್ನು ಇಮ್ಮಡಿಗೊಳಿಸಲಾಗಿದೆ.

ಜಿಲೆಯ ಎಲ್ಲಾ ತಾಲೂಕುಗಳ ತೋಟಗಾರಿಕೆ ಬೆಳೆಗಾರರು ಬೆಳೆದ ವಿವಿಧ ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ ಮತ್ತು ತೋಟದ ಬೆಳೆಗಳ ಉತ್ಪನ್ನಗಳ ಪ್ರದರ್ಶನದ ಜೊತೆಗೆ ಜಿಲ್ಲೆಯಲ್ಲಿ ಅಡಿಕೆ ಬೆಳೆಯೊಂದಿಗೆ ಅಂತರ ಬೆಳೆಗಳನ್ನು ಬೆಳೆದು ಮಾದರಿಯಾಗಿರುವ ರೈತರುಗಳ ವಿವರಣೆಗಳನ್ನು ಪ್ರದರ್ಶಿಸಲಾಗಿದೆ, ಫಲಪುಷ್ಪ ಪ್ರದರ್ಶನ ಕಾರ್ಯಕ್ರಮವನ್ನು ವೀಕ್ಷಣೆ ಮಾಡಲು ಬರುವ ಸಾರ್ವಜನಿಕರಿಗೆ ಪ್ರತಿ ದಿನ ಸಾಯಂಕಾಲ ಸಂಗೀತ ಕಾರಂಜಿಯ ಪ್ರದರ್ಶಗಳನ್ನು ಆಯೋಜಿಸಲಾಗಿದೆ.

ಪ್ರವೇಶ ಶುಲ್ಕವು ಪ್ರತಿ ದಿನದ ಸಂಗೀತ ಕಾರಂಜಿಯ ಪ್ರದರ್ಶನವಿರುವುದರಿಂದ ವಯಸ್ಕರಿಗೆ ರೂ. 30/– ಮತ್ತು ಮಕ್ಕಳಿಗೆ ರೂ.10/– ನಿಗದಿಪಡಿಸಲಾಗಿದೆ. ಫಲಪುಷ್ಪ ಪ್ರದರ್ಶನ ಕಾರ್ಯಕ್ರಮವನ್ನು ಸಾರ್ವಜನಿಕರು ಪ್ರತಿದಿನ ಬೆಳಿಗ್ಗೆ 10 ರಿಂದ ರಾತ್ರಿ 9 ರ ವರೆಗೆ ವೀಕ್ಷಿಸಬಹುದಾಗಿದೆ.

ದಾವಣಗೆರೆ ಹಾಗೂ ಅಕ್ಕಪಕ್ಕದ ಎಲ್ಲಾ ಜಿಲ್ಲೆಗಳ ಸರ್ವ ರೈತಬಾಂಧವರು ಹಾಗೂ ಎಲ್ಲಾ ನಾಗರೀಕರು ತಮ್ಮ ಕುಟುಂಬ ಸಮೇತ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವೀಕ್ಷಿಸಿ ಈ ಫಲಪುಷ್ಪ ಪ್ರದರ್ಶನವನ್ನು ಯಶಸ್ವಿಗೊಳಿಸಲೂ ತೋಟಗಾರಿಕೆ ಜಂಟಿ ನಿರ್ದೇಶಕ ತಿಳಿಸಿದ್ದಾರೆ.

ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಾಮನೂರು ಬಸವರಾಜಪ್ಪ , ಜಿಲ್ಲಾಧಿಕಾರಿ ಜಿ.ಎಂ ಗಂಗಾಧರ ಸ್ವಾಮಿ, ಸಿಇಓ ಗಿತ್ತೆ ಮಾಧವ ವಿಠಲರಾವ್, ತೋಟಗಾರಿಕೆ ಜಂಟಿ ನಿರ್ದೇಶಕ ರಾಘವೇಂದ್ರ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ದೆಹಲಿ 'ಇಂದ್ರಪ್ರಸ್ಥ' ಆಗಲಿ

(1ನೇ ಪುಟದಿಂದ)

ಹೆಸರು "ಇಂದ್ರಪ್ರಸ್ಥ" ಆಗಿದೆ. ಹೀಗಾಗಿ ದೆಹಲಿಯನ್ನು ಇಂದ್ರಪ್ರಸ್ಥ ಎಂದು ಬದಲಾಯಿಸಬೇಕೆಂದು ಪತ್ರ ಬರೆದಿದ್ದಾರೆ.

ದೆಹಲಿ ಅನ್ನುವ ಹೆಸರಿನ ಇತಿಹಾಸಕ್ಕೆ ಸೀಮಿತ ಅವಧಿ ಇದ್ದು, ಈ ನಗರದ ಆಳವಾದ ಹಿನ್ನೆಲೆಯ ಪರಂಪರೆಯಿದೆ. ಹೀಗಾಗಿ ಇತಿಹಾಸದ ಪ್ರಕಾರ ಇರುವ ಇಂದ್ರಪ್ರಸ್ಥ ಎಂಬ ಹೆಸರನ್ನೇ ಮುಂದುವರಿಸುವುದರಿಂದ ಆಧುನಿಕ ಭಾರತದ ರಾಜಧಾನಿಯನ್ನು ಐತಿಹಾಸಿಕ ಹಿನ್ನೆಲೆ ಪುರಾತನ ನಾಗರಿಕತೆಯೊಂದಿಗೆ ಜೋಡಿಸಿದಂತಾಗುತ್ತದೆ ಎಂದು ಹೇಳಿದ್ದಾರೆ

ದೆಹಲಿಯ ಪರಂಪರೆಯು ಅತ್ಯಂತ ಹಳೆದ ಸಂಸ್ಕೃತಿಯ ಸಂಪ್ರದಾಯಗಳಲ್ಲಿ ಒಂದಾಗಿದೆ. ಯಾಕೆಂದರೆ ಮಹಾಭಾರತದ ಪಾಂಡವರ ರಾಜಧಾನಿಗೂ ಈಗಿನ ರಾಷ್ಟ್ರ ರಾಜಧಾನಿಗೂ ಇರುವ ಸಂಬಂಧವನ್ನು ಕೂಡಾ ಅವರು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

**ವಸಂತ** 4K DOLBY ATMOS
ದಿನ 4 ಆಟಗಳು
20.02.2026ರಿಂದ ಪ್ರಾರಂಭ
Tickets are available in bookmyshow
ಕನ್ನಡ ಚಿತ್ರ
ಸಮಯ: ಬೆಳಿಗ್ಗೆ 11ಕ್ಕೆ, ಮಧ್ಯಾಹ್ನ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ




**ಅಶೋಕ** DOLBY DIGITAL dts
ದಿನ 4 ಆಟಗಳು
20.02.2026ರಿಂದ ಪ್ರಾರಂಭ
ticket avabale bookmyshow
ಕನ್ನಡ ಚಿತ್ರ
ಸಮಯ: ಬೆ:11ಕ್ಕೆ, ಮ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ** DOLBY DIGITAL dts
ದಿನ 4 ಆಟಗಳು
20.02.2026ರಿಂದ ಪ್ರಾರಂಭ
ಕನ್ನಡ ಚಿತ್ರ
ಮ: 2–ಕ್ಕೆ
ಬೆ: 11–ಕ್ಕೆ, ಸಂ: 6–ಕ್ಕೆ: ರಾ–9–ಕ್ಕೆ






# ಪ್ರಸ್ತುತ ಸಮಾಜಕ್ಕೆ ಮೌಲ್ಯಯುತ ಸದ್ಗುಣ, ಸಂಸ್ಕಾರಯುತ ಶಿಕ್ಷಣ ಅಗತ್ಯ: ನಾಲ್ವಡಿ ಶ್ರೀಗಳು



ದಾ.ನಗರವಾಣಿ ಸುದ್ದಿ

ಜಗಳೂರು, ಫೆ.25: ಪ್ರಸ್ತುತ ಸಮಾಜಕ್ಕೆ ಮೌಲ್ಯಾಧಾರಿತ ಸದ್ಗುಣ, ಸಂಸ್ಕಾರಯುತ ಶಿಕ್ಷಣ ಅಗತ್ಯವಿದೆ ಎಂದು ಕಣ್ವಕುಪ್ಪೆ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಚಾರ್ಯ ಮಹಾಸ್ವಾಮಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಬುಧವಾರ ಪಟ್ಟಣದ ದಾವಣಗೆರೆ ಮುಖ್ಯ ರಸ್ತೆಯ ನಾಗರಕಟ್ಟೆ ಬಳಿ ಶ್ರೀ ನಾಗದೇವ, ವಿಘ್ನೇಶ್ವರ, ಶಿವ ಪಾರ್ವತಿ ದೇವರುಗಳ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಪೂರ್ವಜರ ಕಾಲಘಟ್ಟದಲ್ಲಿ ಅವಿಭಕ್ತ ಕುಟುಂಬಗಳಿದ್ದು ಅನ್ನ, ವಿದ್ಯೆ, ಸಾರಿಗೆ, ಮೂಲ ಸೌಕರ್ಯಗಳಿರಲಿಲ್ಲ. ನೆಮ್ಮದಿ, ಶಾಂತಿ, ಆರೋಗ್ಯ ಹೇರಳವಾಗಿತ್ತು. ಆದರೆ ಇಂದು ವಿದ್ಯೆ, ಸಂಪತ್ತು, ಅಧಿಕಾರ, ದವಸ ಧಾನ್ಯಗಳೆಲ್ಲವೂ ಹೇರಳವಾಗಿವೆ ಆದರೆ ಸುಖ, ನೆಮ್ಮದಿ, ಶಾಂತಿ, ಆರೋಗ್ಯಗಳು ಕ್ಷೀಣವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಕೃತಿಯಲ್ಲಿ ಪಂಚತತ್ವಗಳು ಸಾರ್ವಕಾಲಿಕವಾಗಿ ಏಕಸ್ವರೂಪವಾಗಿದೆ. ಮನುಷ್ಯನ ಜೀವನ ಶೈಲಿ ಬದಲಾವಣೆಯಾಗಿದೆ. ಸಂಸ್ಕಾರಯುತ ಬದುಕು ರೂಪಿಸಿಕೊಳ್ಳಬೇಕಿದೆ. ವಿದ್ಯಾವಂತರು ಸಂಸ್ಕಾರ ಮರೆಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಮನುಷ್ಯನಿಗೆ ಪುಣ್ಯ ಮತ್ತು ಧರ್ಮ ಕಾರ್ಯಗಳಿಂದ ಮಾತ್ರ ಸುಖ, ನೆಮ್ಮದಿ ಸಿಗುತ್ತದೆ ಎಂದು ಹೇಳಿದರು.

ಜಗತ್ತಿನಲ್ಲಿ ನಂಬಿಕೆ, ವಿಶ್ವಾಸಗಳೆರಡನ್ನೂ ಗಳಿಸಬೇಕು, ಕೌಟುಂಬಿಕ ಜೀವನದಲ್ಲಿ ಗೊಂದಲಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೊರಗದೆ, ಮನಸ್ಸಿನಲ್ಲಿನ ವಿಷಯಗಳನ್ನು ಚರ್ಚಿಸಿ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕೇದಾರ ಪೀಠದ ಉತ್ತರಾಧಿಕಾರಿಯಾದ ನಂತರ ಪ್ರಥಮ ಪ್ರವೇಶ ಇದಾಗಿದ್ದು ಅತ್ಯಂತ ಸಂತಸ ತಂದಿದೆ. ತಾಲ್ಲೂಕಿನಲ್ಲಿ ಗವಿಮಠದ ಪರಂಪರೆ ಉಳಿಸಲು ಭಕ್ತಸಮೂಹಕ್ಕೆ ಚಿರ ಋಣಿಯಾಗಿರುವೆ. ಪಟ್ಟಣದ ಅರಳಿಕಟ್ಟೆಯಲ್ಲಿ ನಾಗದೇವತೆ, ಶಿವ ಪಾರ್ವತಿ, ದೇವರುಗಳ ಪ್ರತಿಷ್ಠಾಪನೆಯ ಧಾರ್ಮಿಕ ಸತ್ಕಾರ್ಯಗಳು ಸ್ವಾಗತಾರ್ಹ ಎಂದರು.

ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್ ಭಾಗವಹಿಸಿ ಮಾತನಾಡಿ, ಆಧುನಿಕ ಬದುಕಿನ ಒತ್ತಡಗಳಲ್ಲಿ ಮನುಷ್ಯನಿಗೆ ನೆಮ್ಮದಿಯಿಲ್ಲದಂತಾಗಿದೆ. ಕೌಟುಂಬಿಕ ಕೂಪದಲ್ಲಿನ ಸ್ವಾರ್ಥ ಬದುಕು, ಸಂಸಾರ, ಹಣಗಳಿಕೆ, ಅಧಿಕಾರ ಲಾಲಸೆಗಳಲ್ಲಿ ಮುಳುಗಿ ಹೋಗಿದ್ದಾರೆ. ಈ ಮಧ್ಯೆ ಪಟ್ಟಣದಲ್ಲಿ ಮಹಿಳೆಯರು ಸೇರಿದಂತೆ ನಾಗರಕ–ಟ್ಟೆ ಬಳಿಯ ನಾಗದೇವರ ಮೂರ್ತಿ ಜೀರ್ಣೋದ್ದಾರ, ಶಿವಪಾರ್ವತಿ, ವಿಘ್ನೇಶ್ವರನ ಮೂರ್ತಿ ಪ್ರತಿಷ್ಠಾಪಿಸಿ ಆರಾಧನೆ ಮಾಡುತ್ತಿರುವುದು ಸಂತಸದ ಸಂಗತಿ. ಧಾರ್ಮಿಕ ಕಾರ್ಯಕ್ರಮಗಳು ಸಾಮರಸ್ಯತೆಯ ಸೆಲೆಗಳಾಗಿವೆ ಎಂದು ಹೇಳಿದರು.

ಇದೇ ವೇಳೆ ಬೆಳಿಗ್ಗೆ ದೇವರುಗಳ ಪ್ರಾಣಪ್ರತಿಷ್ಠಾಪನೆ, ಭಕ್ತ ಸಮೂಹಕ್ಕೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ನಾಗರಕಟ್ಟೆ ಸೇವಾಸಮಿತಿಯ ಅಧ್ಯಕ್ಷ ಚನ್ನಪ್ಪ, ಕಾರ್ಯದರ್ಶಿ ಗಣೇಶ್, ಕುಮಾರಗೌಡ್ರು, ದೊಣೆಹಳ್ಳಿ ಮಂಜುನಾಥ್, ಮನೋಹರ್ ರೆಡ್ಡಿ, ನಾಗರಾಜ್, ಗೌರಿಪುರ ಶಿವಣ್ಣ, ವಿಠ್ಠಲ್ ಶ್ರೇಷ್ಠಿ, ಪ.ಪಂ ಮಾಜಿ ಸದಸ್ಯೆ ಲಲಿತಮ್ಮ ಶಿವಣ್ಣ, ಬಂಗಾರಪ್ಪ, ವೆಂಕಟೇಶ್ ಮೂರ್ತಿ, ಪಂಕಜ ಸೇರಿದಂತೆ ಮಹಿಳೆಯರು ಇದ್ದರು.

# ಕಾರ್ಗಿಲ್ ಸಂಧಾನ ಸಭೆ ಯಶಸ್ವಿ



ದಾ ನಗರವಾಣಿ ಸುದ್ದಿ

ಹರಿಹರ: ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 20 ದಿನಗಳಿಂದ ಅಹೋ ರಾತ್ರಿ ಧರಣಿ ನಡೆಸುತ್ತಿದ್ದ ತಾಲ್ಲೂಕಿನ ಬೆಳ್ಳೂಡಿ ಸಮೀಪದ ಕಾರ್ಗಿಲ್ ಕಂಪನಿಯ ಕಾರ್ಮಿಕರು ಹಾಗೂ ಆಡಳಿತ ಮಂಡಳಿ ನಡುವಿನ ಸುಧೀರ್ಘ ಸಂಧಾನ ಸಭೆ ಯಶಸ್ವಿಯಾಗಿದೆ.

ದಾವಣಗೆರೆಯ ಸಹಾಯಕ ಕಾರ್ಮಿಕ ಆಥಿಣಕ್ತರ ಕಚೇರಿಯಲ್ಲಿ ಬುಧವಾರ ನಡೆದ ಸಭೆಯಲ್ಲಿ ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಉಪ ಕಾರ್ಮಿಕ ಆಯುಕ್ತ ವೆಂಕಟೇಶ್ ಸಿಂಧಿಹಟ್ಟಿ, ಹಾಗೂ ಕಂಪನಿಯ ಆಡಳಿತ ಮಂಡಳಿ, ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನಿರ್ಣಯಗಳು: ಈಗಿರುವ ಕಾರ್ಮಿಕರನ್ನು ಕೆಲಸದಲ್ಲಿ ಮುಂದುವರೆಸಲು ಕಂಪನಿಯ ಈಗಿನ ಆಡಳಿತ ಮಂಡಳಿಯವರು ಹೊಸ ಆಡಳಿತ ಮಂಡಳಿಗೆ ಶಿಫಾರಸ್ಸು ಮಾಡುವುದು. ಧರಣಿ ನಡೆಸಿದ 20 ದಿನಗಳು ಸೇರಿ ಮುಂದಿನ ತಿಂಗಳ ಸಂಬಳವನ್ನು ಈಗಿನ ಕಾರ್ಮಿಕರಿಗೆ ನೀಡುವುದು.

ಎಕ್ಸ್ ಗ್ರೇಷಿಯಾ ಮೊತ್ತವನ್ನು ರೂ.10 ಸಾವಿರಕ್ಕೇರಿಕೆ, ಸ್ವ ಇಚ್ಚೆಯಿಂದ ಕಂಪನಿಯಿಂದ ಹೊರಹೋದ (ವಿ.ಎಸ್.ಎಸ್. ಯೋಜನೆ) ಕಾರ್ಮಿಕರಿಗೆ ರೂ.4..50 ಲಕ್ಷ ಪರಿಹಾರ ನೀಡುವುದು, ಸೇವಾವಧಿಯನ್ನು ಪರಿಗಣಿಸಿ ಕಾರ್ಮಿಕರಿಗೆ ಕ್ರಮವಾಗಿ ವರ್ಷಕ್ಕೆ 75, 80 ಮತ್ತು 105 ದಿನಗಳ ಸಂಬಳವನ್ನು ಮುಚ್ಚುವಿಕೆ ಪರಿಹಾರವಾಗಿ ನೀಡುವುದು.

ಎಂಪ್ಲಾಯ್ ಮೆಂಟ್ ಬೆನಿಫಿಟ್ (ಇ.ಬಿ.) ಮೊತ್ತ ರೂ.1.50 ಲಕ್ಷ, ಗ್ರೂಪ್ ಇನ್ ಸೆಂಟಿವ್ ಮೊತ್ತವನ್ನು ರೂ.3 ಲಕ್ಷಕ್ಕೆ ಹಾಗೂ ಕಾನೂನು ಬದ್ಧ ಉಪಧನ, ರಜಾ ವೇತನ, ಬೋನಸ್ ಪಾವತಿಸುವುದು ಸೇರಿದಂತೆ ವಿವಿಧ ಅಂಶಕ್ಕೆ ಉಭಯತರರು ಒಪ್ಪಿಗೆ ಸೂಚಿಸಿದ್ದಾರೆಂದು ತಿಳಿದು ಬಂದಿದೆ.

ಶಾಸಕ ಬಿ.ಪಿ.ಹರೀಶ್ ಹಾಗೂ ಮಾಜಿ ಶಾಸಕ ಎಸ್.ರಾಮಪ್ಪ ಮಾತನಾಡಿ, ಕಾರ್ಮಿಕರ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವುದು, ಬಹು ನಿರೀಕ್ಷೆಯೊಂದಿಗೆ ಆರಂಭವಾಗಿರುವ ಈ ಕಂಪನಿಯನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗಬೇಕು, ನಮ್ಮಿಂದ ಬೇಕಾಗುವ ಅಗತ್ಯ ಸಹಕಾರವನ್ನು ಆಡಳಿತ ಮಂಡಳಿಯವರಿಗೆ ನೀಡಲಾಗುವುದೆಂದರು.

ಕಂಪನಿಯ ಕಾರ್ಮಿಕ ಸಂಘದ ಗೌರವಾಧ್ಯಕ್ಷ ಮಂಜುನಾಥ ಕೈದಾಳೆ ಮಾತನಾಡಿ, ಸಂಧಾನ ಸಭೆಯಲ್ಲಿ ಕಾರ್ಮಿಕರಿಗೆ ತಕ್ಕ ಮಟ್ಟಿಗೆ ನ್ಯಾಯ ಸಿಕ್ಕಿರುವುದರಿಂದ ಧರಣಿಯನ್ನು ಹಿಂಪಡೆಲಾಗುವುದು, ಫೆ.25ರಿಂದಲೆ ಕೆಲಸಕ್ಕೆ ಹಾಜರಾಗುವುದು ಹಾಗೂ ಸಂಧಾನ ಸಭೆಯ ಅಂಶಗಳನ್ನು ಆದಷ್ಟು ಶೀಘ್ರ ಜಾರಿ ಮಾಡಿ ಆದೇಶಿಸಬೇಕೆಂದು ಆಗ್ರಹಿಸಿದರು.

ಹಿರಿಯ ಕಾರ್ಮಿಕ ಮುಖಂಡ ಎಚ್.ಕೆ.ಕೊಟ್ರಪ್ಪ, ಪರಿಸರ ಸಂರಕ್ಷಣಾ ವೇದಿಕೆ ಸಂಚಾಲಕ ಬಿ.ಮಗ್ದುಮ್, ರೈತ ಮುಖಂಡರಾದ ಹೊನ್ನೂರು ಮುನಿಯಪ್ಪ, ಬುಳ್ಳಾಪುರದ ಹನುಮಂತಪ್ಪ, ಗುಮ್ಮನೂರು ಬಸವರಾಜ್, ಸಹಾಯಕ ಕಾರ್ಮಿಕ ಆಯುಕ್ತ ಅವಿನಾಶ್ ನಾಯಕ್, ಜಿಲ್ಲಾ ಕಾರ್ಮಿಕ ಅಧಿಕಾರಿ ಅರವಿಂದ್, ಕಾರ್ಮಿಕ ನಿರೀಕ್ಷಕಿ ಕವಿತಾ, ಕಾರ್ಮಿಕ ಸಂಘದ ಅಧ್ಯಕ್ಷ ಸಂಜಯ್ ಜೆ. ಹಾಗೂ ಆಡಳಿತ ಮಂಡಳಿಯ ಪ್ರತಿನಿಧಿಗಳು ಭಾಗವಹಿಸಿದ್ದರು.

## ಮಾ.1ಕ್ಕೆ ಪೊಲೀಸ್ ಮ್ಯಾರಥಾನ್

ದಾ ನಗರವಾಣಿ ಸುದ್ದಿ

ದಾವಣಗೆರೆ.ಫೆ.25: ದಾವಣಗೆರೆ ಜಿಲ್ಲಾ ಪೊಲೀಸ್ ವತಿಯಿಂದ ಮೂರನೇ ಆವೃತ್ತಿಗೆ ಬರುವ ಮಾರ್ಚ್ 1ರಂದು ಬೆಳಿಗ್ಗೆ 6 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಿಂದ ನಮ್ಮ ಪೊಲೀಸ್ ನಮ್ಮ ಹೆಮ್ಮೆ "ಪೊಲೀಸ್ ಮ್ಯಾರಥಾನ್ 2026" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನಗರದ ಜಿಲ್ಲಾ ಕ್ರೀಡಾಂಗಣದಿಂದ 5ಕೆ & 10ಕೆ ಮ್ಯಾರಥಾನ್ ಓಟದ ಸ್ಪರ್ದೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲಾ ವಯೋಮಾನದವರು ಭಾಗವಹಿಸಬಹುದಾಗಿದೆ. ವಿಶೇಷವಾಗಿ ಮಹಿಳೆಯರಿಗಾಗಿಯೇ 5ಕೆ ಮ್ಯಾರಥಾನ್ ಓಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಂಸಾ ಪತ್ರ ಹಾಗೂ ನಗದು ಬಹುಮಾನ ನೀಡಲಾಗುತ್ತಿದ್ದು, ಆಸಕ್ತ ಸಾರ್ವಜನಿಕರು, ಯುವ ಸಮೂಹ, ವಿದ್ಯಾರ್ಥಿಗಳು, ದಾವಣಗೆರೆ ಜಿಲ್ಲಾ ಮಾಧ್ಯಮ ಮಿತ್ರರು, (ಪೊಲೀಸ್ ಇಲಾಖೆ ಹೊರತು ಪಡಿಸಿ) ಇತರೆ ಸರ್ಕಾರಿ/ ಖಾಸಗಿ ನೌಕರರು ಗೂಗಲ್ ಫಾರ್ಮನಲ್ಲಿ ಸೂಚಿಸಲಾಗಿರುವ ಮಾಹಿತಿಯನ್ನು ಭರ್ತಿ ಮಾಡಿ, ಹೆಸರು ನೊಂದಹಿಸಬೇಕೆಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

## ಇಂದು ಉಪನ್ಯಾಸ

ದಾ ನಗರವಾಣಿ ಸುದ್ದಿ

ದಾವಣಗೆರೆ. ಫೆ.25: ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದ ಅಡಿಯಲ್ಲಿ ಫೆ.26ರ ಇಂದು ಮಧ್ಯಾಹ್ನ 3.30ಕ್ಕೆ ನಗರದ ಬಾಪೂಜಿ ಮಕ್ಕಳ ಸಂಸ್ಥೆ ಮತ್ತು ಸಂಶೋಧನ ಕೇಂದ್ರದ ಸಭಾಂಗಣದಲ್ಲಿ "" ಆರಂಭವಾಗುತ್ತಿದೆ ಬೇಸಿಗೆ – ಸಾಂಕ್ರಾಮಿಕ ರೋಗಗಳ ಬಗ್ಗೆ ಎಚ್ಚರವಿರಲಿ" ಎಂಬ ವಿಷಯದ ಕುರಿತು ಜ.ಜ.ಮು. ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ಅನುರೂಪ ಎಂ.ಎಸ್. ಉಪನ್ಯಾಸ ನೀಡಲಿದ್ದಾರೆ.

## ಫೆ.27ರಿಂದ ಶಿವಸಂಚಾರ ನಾಟಕೋತ್ಸವ

ದಾವಣಗೆರೆ: ಶ್ರೀ ಶಿವಕುಮಾರ ಕಲಾ ಸಂಘ ಹಾಗೂ ಸಾಣೇಹಳ್ಳಿಯ ತರಳಬಾಳು ಸೇವಾ ಟ್ರಸ್ಟ್ ಸಹಯೋಗದೊಂದಿಗೆ 'ಶಿವಸಂಚಾರ–25' ನಾಟಕೋತ್ಸವವನ್ನು ಫೆ. 27 ರಿಂದ ಮಾರ್ಚ್ 1 ರವರೆಗೆ ಮೂರು ದಿನಗಳ ಕಾಲ ನಗರದ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 27ರ ಶುಕ್ರವಾರ ಸಂಜೆ 6 ಗಂಟೆಗೆ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಹೆಚ್.ವಿ. ವಾಮದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದಾವಣಗೆರೆ ತರಳಬಾಳು ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಾವಣಗೆರೆ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಹಾಗೂ ತರಳಬಾಳು ಸೇವಾ ಟ್ರಸ್ಟ್ ನಿರ್ದೇಶಕ ಶಿವನಳ್ಳಿ ರಮೇಶ್ ಭಾಗವಹಿಸಲಿದ್ದಾರೆ.

ಮಾರ್ಚ್ 1ರ ಭಾನುವಾರ ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ಏರ್ಪಡಿಸಲಾಗಿದ್ದು, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ. ಮಂಜುನಾಥ ಕುರ್ಕಿ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ಅತಿಥಿಗಳಾಗಿ ಟ್ರಸ್ಟ್ ನಿರ್ದೇಶಕ ಗಡಿಗುಡಾಳ್ ಮಂಜುನಾಥ್ ಉಪಸ್ಥಿತರಿರಲಿದ್ದಾರೆ. ಸಾಂಸ್ಕೃತಿಕ ಹಬ್ಬದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಬೇಕೆಂದು ಸಂಘಟಕರಾದ ಶಿರಗುಂಬಿ, ಅವರಗೆರೆ ರುದ್ರಮುನಿ, ಕೆ.ನಾಗಪ್ಪ ಮತ್ತು ಮಂಜುನಾಥ ಕುರ್ಕಿ ಕೋರಿದ್ದಾರೆ.

## ನಾಲ್ವರು ವ್ಯಕ್ತಿಗಳು ನಾಪತ್ತೆ: ದೂರು

ಹರಿಹರ: ಓರ್ವ ಯುವತಿ ಸೇರಿದಂತೆ ನಾಲ್ವರು ವ್ಯಕ್ತಿಗಳು ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಕಾಣೆಯಾಗಿರುವ ಕುರಿತು ಇಲ್ಲಿನ ಗ್ರಾಮಾಂತರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣ1: ಶಿವಮೊಗ್ಗ ಕಡೆ ಕೆಲಸಕ್ಕೆ ಹೋಗುವುದಾಗಿ ರುದ್ರಪ್ಪ ಎಂಬುವರು 2024ರ ಜು.13 ರಿಂದ ಮನೆಯಿಂದ ಹೊರಟವರು ಈವರೆಗೂ ವಾಪಸ್ ಬಂದಿಲ್ಲ. ಚಹರೆ: 60 ವರ್ಷ ವಯಸ್ಸು, 5.5 ಅಡಿ ಎತ್ತರ, ಕನ್ನಡ, ಹಿಂದಿ, ತೆಲುವು ಮಾತನಾಡುತ್ತಾರೆ, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ತಲೆಯಲ್ಲಿ ಕಪ್ಪು ಕೂದಲು, ಬಲ ಎದೆಯ ಹತ್ತಿರ ಸಣ್ಣಕಪ್ಪು ಮಚ್ಚೆ ಇದೆ.

ಪ್ರಕರಣ2: ಗುತ್ತೂರಿನ ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡುತ್ತಿದ್ದ ಲಕ್ಕಪ್ಪ ಎಂಬುವರು 2025ರ ಜೂ.23 ರಂದು ಮನೆಯಿಂದ ಹೊರಟವರು ಈವೆರೆಗ ಬಂದಿಲ್ಲ. ಚಹರೆ: 58 ವರ್ಷ ವಯಸ್ಸು, 5.2 ಅಡಿ ಎತ್ತರ, ಬಿಳಿ ಶರ್ಟ್, ಕಪ್ಪು ಪ್ಯಾಂಟ್ ಧರಿಸಿದ್ದಾರೆ, ಕೋಲು ಮುಖ, ಕಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ತಲೆಯಲ್ಲಿ ಕಪ್ಪು, ಬಿಳಿಕೂದಲು, ಕುರುಚಲು ಗಡ್ಡ ಇದೆ.

ಪ್ರಕರಣ3: 2025ರ ನ.5 ರಂದು ಕೆಲಸಕ್ಕೆ ಹೋಗುತ್ತೇನೆಂದು ಮನೆಯಿಂದ ಹೊರಟ ಗೋಣಪ್ಪ ಬಿ. ಎಂಬುವರು ಈವೆರೆಗ ಮರಳಿಲ್ಲ. ಚಹರೆ: 58 ವರ್ಷ ವಯಸ್ಸು, 5.6 ಅಡಿ ಎತ್ತರ, ಹೂವುಗಳಿರುವ ಬಿಳಿ ಶರ್ಟ್, ಸಿಮೆಂಟ್ ಬಣ್ಣದ ಪ್ಯಾಂಟ್ ಧರಿಸಿದ್ದಾರೆ, ದುಂಡು ಮುಖ, ಎಣ್ಣೆ ಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ತಲೆಯಲ್ಲಿಕಪ್ಪು, ಬಿಳಿ ಕೂದಲುಇದೆ.

ಪ್ರಕರಣ4: 2025ರ ಜೂ.27ರಂದು ಮನೆಯಿಂದ ಹೊರಟ ಸಹನಾ ಎಂಬ ಯುವತಿ ಈವರೆಗೆ ವಾಪಸ್ ಬಂದಿಲ್ಲ. ಚಹರೆ: 18 ವರ್ಷ ವಯಸ್ಸಿನ, 142 ಸೆಂ.ಮೀ.ಎತ್ತರ, ಉದ್ದನೆ ಮುಖ, ಸಾಧಾರಣ ಮೈಕಟ್ಟು, ಕಪ್ಪು ಕೂದಲು, ಬಿಳಿ ಬಣ್ಣದಟೀ ಶರ್ಟ್, ಕಪ್ಪು ಪ್ಯಾಂಟ್ ಧರಿಸಿದ್ದಾರೆ. ಕನ್ನಡ ಭಾಷೆ ಮಾತನಾಡುತ್ತಾರೆ.

ಕಾಣೆಯಾದ ಈ ವ್ಯಕ್ತಿಗಳ ಬಗ್ಗೆ ಮಾಹಿತಿಇದ್ದವರುಗ್ರಾಮಾಂತರ ಪೊಲೀಸ್‌ಠಾಣೆ ಫೋನ್ ನಂ.08192 272017, 9480803258 ಸಂಪರ್ಕಿಸಲುಕೋರಲಾಗಿದೆ.

## ಪ್ರಧಾನಿ ಎರಡು ದಿನಗಳ ಇಸ್ರೇಲ್...

(1ನೇ ಪುಟದಿಂದ) ಒಟ್ಟಿಗೆ ಭಾಗವಹಿಸಲಿದ್ದಾರೆ. 2017ರ ಜುಲೈನಲ್ಲಿ ನಡೆದ ಹಿಂದಿನ ಭೇಟಿಯಂತೆ, ತೆಲ್ ಅವೀವ್ ವಿಮಾನ ನಿಲ್ದಾಣದಲ್ಲಿ ನೆತನ್ಯಾಹು ಅವರು ಪ್ರಧಾನಿ ಮೋದಿಯನ್ನು ಸ್ವಾಗತಿಸಲಿದ್ದಾರೆ. ನಂತರ ಇಬ್ಬರು ಜೆರುಸಲೆಮ್‌ಗೆ ಒಟ್ಟಿಗೆ ಪ್ರಯಾಣಿಸುವ ನಿರೀಕ್ಷೆಯಿದೆ.

ನಾಳೆ ದ್ವಿಪಕ್ಷೀಯ ಮಾತುಕತೆ ಮತ್ತು ಜಂಟಿ ಪತ್ರಿಕಾಗೋಷ್ಠಿ ನಡೆಯಲಿದೆ. ಅದಲ್ಲದೆ, ಪ್ರಧಾನಿ ಮೋದಿ ಇಸ್ರೇಲ್ ಸಂಸತ್ತಾದ ಕ್ನೆಸೆಟ್‌ನಲ್ಲಿ ಭಾಷಣ ಮಾಡಲಿದ್ದು, ಖಾಸಗಿ ಭೋಜನ, ನವೋತ್ಪಾದನಾ ಕಾರ್ಯಕ್ರಮ, ಯಾದ್ ವಶೆಮ್ ಹೋಲೋಕಾಸ್ಟ್ ಸ್ಮಾರಕ ಸಂಗ್ರಹಾಲಯಕ್ಕೆ ಭೇಟಿ ಹಾಗೂ ಇಸ್ರೇಲ್‌ನಲ್ಲಿ ನೆಲೆಸಿರುವ "ಭಾರತೀಯ–ಯಹೂದಿ" ಸಮುದಾಯದೊಂದಿಗೆ ಸಂವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಾಧ್ಯತೆ ಇದೆ.

ಈ ಎರಡು ದಿನಗಳ ಭೇಟಿಯ ವೇಳೆ ದ್ವಿಪಕ್ಷೀಯ ಹಾಗೂ ಪ್ರಾದೇಶಿಕ ಮಹತ್ವದ ಎಲ್ಲಾ ಪ್ರಮುಖ ವಿಷಯಗಳ ಬಗ್ಗೆ ಪ್ರಧಾನಿ ಮೋದಿ ಪ್ರಸ್ತಾಪಿಸುವ ಸಾಧ್ಯತೆ ಇದೆ.

ಇದು ಪ್ರಧಾನಿಯವರಿಗೆ ಇಸ್ರೇಲ್‌ಗೆ ಎರಡನೇ ಭೇಟಿ ಆಗಿದ್ದು, ಮೊದಲ ಭೇಟಿ ಜುಲೈ 2017ರಲ್ಲಿ ನಡೆದಿತ್ತು. ಅದು ಇಸ್ರೇಲ್‌ಗೆ ಭಾರತೀಯ ಪ್ರಧಾನಮಂತ್ರಿಯೊಬ್ಬರು ನೀಡಿದ ಮೊದಲ ಐತಿಹಾಸಿಕ ಭೇಟಿ ಆಗಿತ್ತು. ಇತ್ತೀಚಿನ ಈ ಉನ್ನತ ಮಟ್ಟದ ಭೇಟಿ, ಎರಡೂ ದೇಶಗಳ ನಡುವೆ ನಡೆದ ಹಲವು ಉನ್ನತ ಮಟ್ಟದ ಸಚಿವರ ವಿನಿಮಯಗಳ ನಂತರ ನಡೆಯುತ್ತಿರುವುದು ಗಮನಾರ್ಹವಾಗಿದೆ.

## ನಮ್ಮನ್ನೂ ಮಂತ್ರಿ ಮಾಡಿ: ಈಗ...

(1ನೇ ಪುಟದಿಂದ)

ಸಂಪುಟದಲ್ಲಿ ಎಂಎಲ್‌ಸಿಗಳಿಗೆ ಪ್ರಾತಿನಿಧ್ಯ ಇಲ್ಲದಿರುವುದು ಅಸಮಾನತೆ, ನಿರುತ್ಸಾಹ ಭಾವನೆ ಉಂಟುಮಾಡುತ್ತೆ. ಇದು ಎಂಎಲ್‌ಸಿಗಳಿಗೆ ರಾಜಕೀಯ ನಿರೀಕ್ಷೆಗಳಿಲ್ಲ ಎಂಬ ಗ್ರಹಿಕೆಗೆ ಕಾರಣವಾಗುತ್ತದೆ. ಸಮರ್ಥ ನಾಯಕರು ಎಂಎಲ್‌ಸಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಬದಲು ವಿಧಾನಸಭಾ ಟಿಕೆಟ್‌ಗಳನ್ನ ಪಡೆಯಲು ಮುಂದಾಗುತ್ತಾರೆ.

ನಂತರ ಇದು ಗುಂಪುಗಾರಿಕೆಗೆ ಕಾರಣವಾಗುತ್ತದೆ. ಪಕ್ಷದ ಸಂಘಟನೆಯನ್ನು ದುರ್ಬಲಗೊಳಿಸುತ್ತದೆ. ಎಲ್ಲಾ ಎಂಎಲ್‌ಸಿಗಳು ಪಕ್ಷದ ಸಂಘಟನೆಯನ್ನು ಬಲಪಡಿಸುವಲ್ಲಿ ಆಳವಾಗಿ ತಮ್ಮನ್ನ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ವಿಧಾನ ಪರಿಷತ್ತಿನ ಕನಿಷ್ಠ 5 ಸದಸ್ಯರನ್ನ ಸಚಿವ ಸಂಪುಟದಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿದ್ದಾರೆ ಎಂದು ತಿಳಿದು ಬಂದಿದೆ.

**CHANGE OF NAME**

I, **RIYAZ AHMED** (new name), previously called **REAZ AHMED** (old name), resident of #1291/1, 2nd Main, 7th Cross, K.T.J. Nagar, Davangere - 577002 have changed my name as **RIYAZ AHMED** vide affidavit dated 25-02-2026 sworn before Notary B. Lingaraj, Davangere. Henceforth all my transactions & dealings will be in my new name **RIYAZ AHMED.**


# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ದಾ ನಗರವಾಣಿ ಸುದ್ದಿ

ಹರಿಹರ : ನಗರದ ಜೆ,ಸಿ ಬಡಾವಣೆಯ ಹಳ್ಳದ ರಸ್ತೆಗೆ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಬಿ.ಪಿ ಹರೀಶ್ ಚಾಲನೆ ನೀಡಿದರು. ಪೌರಾಯುಕ್ತೆ ಈರಮ್ಮ, ಎಇಇ ವಿನಯ್, ಕಾವೇರಿ, ನಗರಸಭಾ ಮಾಜಿ ಸದಸ್ಯರಾದ ಆಟೋ ಹನುಮಂತಪ್ಪ, ಗುತ್ತಿಗೆದಾರ ಸುಭಾಸ್, ಕರವೇ ತಾಲೂಕು ಅಧ್ಯಕ್ಷ ರಮೇಶ್ ಮಾನೆ, ನಗರ ಅಧ್ಯಕ್ಷ ಪ್ರೀತಮ್ ಬಾಬು, ಚಂದ್ರು, ಶ್ರೀನಿವಾಸ್ ಉಪಸ್ಥಿತರಿದ್ದರು. ಅಲಿ ಅಕ್ಬರ್, ಸಿದ್ದಪ್ಪ, ಬಿ. ಮುಗ್ದುಮ್, ಹಾಲಸ್ವಾಮಿ, ಜಗದೀಶ್ ಮಾನೆ ಇದ್ದರು.

# ತೌಡೂರು ಸರ್ಕಾರಿ ಪ್ರೌಢಶಾಲೆಗೆ ಜಿಲ್ಲಾ ಮಟ್ಟದ ಉತ್ತಮ ಶಾಲಾ ಪ್ರಶಸ್ತಿ



**ಹರಪನಹಳ್ಳಿ**

ದಾ ನಗರವಾಣಿ ಸುದ್ದಿ

ಹರಪನಹಳ್ಳಿ: ತಾಲೂಕಿನ ತೌಡೂರು ಗ್ರಾಮದ ಎ.ಎಂ.ಕಾಡಮ್ಮ ವೀರಯ್ಯ ಸರ್ಕಾರಿ ಪ್ರೌಢಶಾಲೆ ತೌಡೂರು ಶಾಲೆಗೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯಿಂದ ವಿಜಯನಗರ ಜಿಲ್ಲೆಯ ಪ್ರತಿ ತಾಲೂಕಿನಿಂದ ಒಂದು ಉತ್ತಮ ಪ್ರೌಢಶಾಲೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ತಂಡವು ಭೇಟಿ ನೀಡಿ ಆಯ್ಕೆ ಮಾಡಿದೆ.

ಈ ಮೂಲಕ ಹರಪನಹಳ್ಳಿ ತಾಲೂಕಿನ ತೌಡೂರು ಸರ್ಕಾರಿ ಪ್ರೌಢ ಶಾಲೆಗೆ ಉತ್ತಮ ಎಸ್.ಡಿ.ಎಂ.ಸಿ. ಪ್ರಶಸ್ತಿ ಲಭಿಸಿರುತ್ತದೆ, ಈ ಪ್ರಶಸ್ತಿ ಒಂದು ಲಕ್ಷ ನಗದು ಮೊತ್ತವನ್ನು ಹೊಂದಿರುತ್ತದೆ. ಈ ಪ್ರಶಸ್ತಿ ಲಭಿಸಿದ್ದಕ್ಕೆ ಎಸ್. ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ದಾನಿಗಳು, ಊರಿನ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಮುಖ್ಯ ಗುರುಗಳಾದ ಸೈಯದ್ ಮುಬೀನಾ ಮಾತನಾಡಿ, ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಅನುಕೂಲವಾಗಲಿದೆ,ಈ ಶಾಲೆಯಲ್ಲಿ 285 ಮಕ್ಕಳು ಹಾಜರಿದ್ದು, 10 ನೇ ತರಗತಿಯಲ್ಲಿ 73 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಊರಿನ ಎಲ್ಲರ ಸಹಕಾರ ದಿಂದ ಈ ಪ್ರಶಸ್ತಿ ಲಭಿಸಿದೆ, ಊರಿನ ಎಲ್ಲಾ ಗ್ರಾಮಸ್ಥರಿಗೆ, ಶಾಲೆಯ ಶಿಕ್ಷಕರಿಗೆ, ಎಸ್.ಡಿ.ಎಂ.ಸಿ. ಅಧ್ಯಕ್ಷ, ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ.ಅಧ್ಯಕ್ಷ ಟಿ.ಪ್ರಕಾಶ್, ಮುಖ್ಯ ಗುರುಗಳಾದ ಸೈಯದ್ ಮುಬೀನ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎನ್.ಜಿ.ಮನೋಹರ್, ಸಹ ಶಿಕ್ಷಕರಾದ ಸದಾನಂದ್ ನಾಯಕ್, ಬಸವರಾಜ್, ಜಗದೀಶ್, ಬಾಬು ರಾಜೇಂದ್ರ, ರೇಷ್ಮಾ, ಶ್ರೀಕಾಂತ್, ಅತಿಥಿ ಶಿಕ್ಷಕರಾದ ಸಿದ್ದೇಶ್, ಪ್ರೇಮ ಹಾಗೂ ಶಾಲಾ ಮಕ್ಕಳು ಹಾಜರಿದ್ದರು.


# ಎರಡು ಸಲ ಪಕ್ಷ ಅಧಿಕಾರಕ್ಕೆ ತಂದಿದ್ದೇನೆ; ನನ್ನನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ: ಜಿ ಪರಮೇಶ್ವರ್

(1ನೇ ಪುಟದಿಂದ)

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಭಿಪ್ರಾಯ ಮಂಡಿಸಬೇಕು. ನಂತರದಲ್ಲಿ ಸಾಧಕಬಾಧಕಗಳ ಬಗ್ಗೆ ಚರ್ಚೆ ಆಗಲಿದೆ ಎಂದರು.

ನನ್ನ ಹೆಸರು ಕೂಗಿದ ತಕ್ಷಣ ಏನು ಆಗಲ್ಲ, ಹಾಗಂತ ಅದು ತಪ್ಪು ಅಂತಾನೂ ಹೇಳಕ್ಕೆ ಆಗಲ್ಲ. ನಾನು ಒಬ್ಬ ಶಿಸ್ತಿನ ಪಕ್ಷದ ಸಿಪಾಯಿ. ಹೈ ಕಮಾಂಡ್ ಏನು ತೀರ್ಮಾನ ಮಾಡ್ತಾರೆ ಅದಕ್ಕೆ ಬದ್ದನಾಗಿರುತ್ತೇನೆ. ನಾನು ನಿಮ್ಮ ಮುಂದೆ ಹೇಳಿಕೆ ನೀಡಿ ಸಿಎಂ ಆಗಬೇಕು ಅಂದ್ರೆ ಆಗಕ್ಕೆ ಆಗುತ್ತಾ? ಅದು ಸಾರ್ವಜನಿಕವಾಗಿ ಚರ್ಚೆ ಆಗುತ್ತೆ ಅಷ್ಟೇ ನಾನು ಸಮರ್ಥ ಅಂತಾ ಎಷ್ಟು ಬಾರಿ ಸಾಬೀತು ಮಾಡಬೇಕು? ಐದು ವರ್ಷ ಕೆಪಿಸಿಸಿ ಅಧ್ಯಕ್ಷನಾಗಿದ್ದೆ. ಸಮರ್ಥ ಇಲ್ಲದೇ ಕೆಲಸ ಮಾಡಿದ್ದೇನಾ? ಎಂದು ಮರು ಪ್ರಶ್ನಿಸಿದರು.

# ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಬಜೆಟ್‌ನ ಶೇ.30 ಹಣ ಮೀಸಲಿಡಲು ಎಸ್‌ಎಫ್‌ಐ ಆಗ್ರಹ




ದಾ ನಗರವಾಣಿ ಸುದ್ದಿ

ರಾಣೇಬೆನ್ನೂರ: ಶಿಕ್ಷಣದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಬಜೆಟ್ ನ 30% ಹಣವನ್ನು ಮೀಸಲಿಡಲು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ರಾಣೇಬೆನ್ನೂರ ತಾಲ್ಲೂಕ ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬಸ್ ನಿಲ್ದಾಣದಿಂದ ಮೆರವಣಿಗೆ ನಡೆಸಿ ತಾಲ್ಲೂಕು ಪಂಚಾಯತ ಆವರಣದಲ್ಲಿರುವ ಶಾಸಕರ ಕಛೇರಿ ಎದುರು ಪ್ರತಿಭಟನೆ ನಡೆಸಿ ರಾಣೇಬೆನ್ನೂರ ವಿಧಾನಸಭಾ ಕ್ಷೇತ್ರದ ಶಾಸಕರ ಆಪ್ತ ಸಹಾಯಕರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಮುಖಂಡ ಅರುಣ್ ನಾಗವತ್ ಮಾತನಾಡಿ, ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಮಾ. 6ರಂದು ಸಿಎಂ ಸಿದ್ದರಾಮಯ್ಯನವರು ಮಂಡಿಸುವ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಶೇ.30ರಷ್ಟು ಅನುದಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಬೇಕು.

ರಾಣೇಬೆನ್ನೂರ ತಾಲ್ಲೂಕಿಗೆ ಸರ್ಕಾರಿ ನರ್ಸಿಂಗ್, ಪ್ಯಾರಮೆಡಿಕಲ್, ಬಿ ಫಾರ್ಮ್, ಎಮ್ ಫಾರ್ಮ, ಸರ್ಕಾರಿ ಜಿಟಿಟಿಸಿ, ಡಿಪ್ಲೊಮಾ, ಸೇರಿದಂತೆ ವಿವಿಧ ರೀತಿಯ ಕೋರ್ಸಿನ ಕಾಲೇಜ್ ಗಳನ್ನು ಮಂಜೂರು ಮಾಡಬೇಕು. ನಗರದ ಮುನ್ಸಿಪಲ್ ಹೈಸ್ಕೂಲಿನಲ್ಲಿರುವ ಸರ್ಕಾರಿ ಐಟಿಐ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲ ಆದರಿಂದ ಸ್ವಂತ ಕಟ್ಟಡವನ್ನು ಮಂಜೂರು ಮಾಡಿಸಬೇಕು. ಜಿಲ್ಲೆಗೆ ದೊಡ್ಡ ನಗರದ ರಾಣೇಬೆನ್ನೂರಿಗೆ ಹೈಟೆಕ್ ಬಸ್ ನಿಲ್ದಾಣ ಮಾಡಬೇಕು. ನಗರ ಸಾರಿಗೆ ಪ್ರಾರಂಭ ಮಾಡಬೇಕು.

ಸರ್ಕಾರಿ ಇಂಜಿನಿಯರಿಂಗ್, ಮೆಡಿಕಲ್, ಪ್ಯಾರಮೆಡಿಕಲ್, ನರ್ಸಿಂಗ್, ಹಾವೇರಿ ವಿಶ್ವವಿದ್ಯಾಲಯ, ಶಿಗ್ಗಾಂವಿ ಜಾನಪದ ವಿವಿ, ಹನುಮನಮಟ್ಟಿ ಕೃಷಿ ವಿವಿಗಳು ಸೇರಿದಂತೆ ಜಿಲ್ಲೆಯ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಅನುದಾನ ಬಿಡುಗಡೆ ಮಾಡಬೇಕು. ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಸರ್ಕಾರಿ ಕಾನೂನು ವಿದ್ಯಾಲಯ ಶೀಘ್ರವಾಗಿ 3 ಮತ್ತು 5 ವರ್ಷದ ಕೋರ್ಸ್ ಗಳನ್ನು ಪ್ರಾರಂಭಿಸಬೇಕು. ಪ್ರತ್ಯೇಕ ವೃತ್ತಿಪರ ಹಾಸ್ಟೆಲ್ ಗಳು ಮಂಜೂರು ಮಾಡಬೇಕು.

ಹಾಸ್ಟೆಲ್ ವಿದ್ಯಾರ್ಥಿಗಳ ಮಾಸಿಕ ಆಹಾರ ಭತ್ಯೆ ಯನ್ನು ಕನಿಷ್ಠ 4.500ರೂ ಗಳಿಗೆ ಹೆಚ್ಚಿಸಬೇಕು. ಜಿಲ್ಲೆಗೆ ಹೆಚ್ಚುವರಿಯಾಗಿ ಕನಿಷ್ಟ 10 ಹಾಸ್ಟೆಲ್ ಮಂಜೂರು ಮಾಡಬೇಕು. ರಾಜ್ಯದಲ್ಲಿ ಶಿಕ್ಷಣದ ಶುಲ್ಕ ಕಟ್ಟಲು ಶೈಕ್ಷಣಿಕ ಸಾಲ ಮಾಡಿಕೊಂಡಿರುವ ಎಲ್ಲ ವರ್ಗದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಮನ್ನಾ ಮಾಡಬೇಕು. ಸಮರ್ಪಕ ಸಾರಿಗೆ ವ್ಯವಸ್ಥೆ ಕಲ್ಪಿಸಲು ಹಾಗೂ ಉನ್ನತ ಶಿಕ್ಷಣದವರೆಗೂ (ಎಲ್.ಕೆ.ಜಿ ಯಿಂದ ಪಿಎಚ್.ಡಿವರೆಗೆ), ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಬೇಕು.

ಈ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲ ಶಾಸಕರು ವಿಧಾನ ಸಭಾ ಬಜೆಟ್ ಅಧಿವೇಶನದಲ್ಲಿ ಧ್ವನಿ ಎತ್ತಬೇಕೆಂದೂ ಒತ್ತಾಯಿಸುತ್ತೇವೆ. ಇಲ್ಲದಿದ್ದರೆ ರಾಜ್ಯಾದ್ಯಂತ ವಿದ್ಯಾರ್ಥಿಗಳ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಎಫ್‌ಐ ಕಾರ್ಯಕರ್ತೆ ತನ್ಮಯಿ ಎನ್ ಮಾತನಾಡಿ, ವಿದ್ಯಾರ್ಥಿನಿಯರ ಸಂ–ಖ್ಯೆ ಜಾಸ್ತಿಯಿದ್ದು ಸರ್ಕಾರಿ ಮಹಿಳಾ ಪಿಯು, ಪ್ರಥಮ ದರ್ಜೆ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್ ಗಳನ್ನು ಮಂಜೂರು ಮಾಡಬೇಕು. ವಿದ್ಯಾರ್ಥಿನಿಯರು ಸಂಖ್ಯೆಗೆ ಅನುಗುಣವಾಗಿ ಕನಿಷ್ಠ 5 ಹಾಸ್ಟೆಲ್ ಗಳನ್ನು ಮಂಜೂರು ಮಾಡಬೇಕು. ನಗರಕ್ಕೆ ಪ್ರತ್ಯೇಕವಾಗಿ ಮಹಿಳಾ ಪೋಲಿಸ್ ಇಲಾಖೆ ಮಂಜೂರು ಮಾಡಬೇಕು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಶಾರದ ಕೋರವಾರ, ಲಕ್ಷ್ಮಿ ಕೋರವಾರ, ಸೌಮ್ಯ ಬುಳ್ಳನ ಗೌಡ್ರು, ಅರ್ಪಿತ ಓಲೆಕಾರ್, ಪ್ರತಿಭಾ ಆರ್, ಗೌತಮಿ, ಪೂಜಾ, ಐಶ್ವರ್ಯ ಕೆ, ದಿವ್ಯಾ ಮಲ್ಲೂರು, ಕೆಂಚವ್ವ ಚಲವಾದಿ, ಸುಧಾ, ರಾಧಿಕಾ, ದ್ರಾಕ್ಷಾಯಿಣಿ, ಕಾವೇರಿ ಅಗಡಿ, ಭವ್ಯ, ಸವಿತಾ ಮೆಡ್ಲೇರಿ, ಸಂಜನಾ ಕಾಂಬಳೆ, ಅರ್ಪಿತ ಅಗಸ್ಯ, ಚೈತ್ರ ಗಂಗಾವತಿ, ಕಾವ್ಯ ಬಾರ್ಕಿ, ರೇಣುಕಾ ಬಾರ್ಕಿ, ಮಂಗಳ ಹಲ್ಗೇರಿ, ಸಿಂಚನ ಹಲಗೇರಿ, ಕಾರ್ತಿಕ್ ಕರ್ಜಗಿ, ಧ್ರುವ ಕೆ, ಸಂತೋಷ್, ಪ್ರದೀಪ್ ಟಿ, ನವೀನ್ ಕುಮಾರ್ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.